ಕಾರ್ಮಿಕವರ್ಗದ ಮಹಾನ್ ನಾಯಕ

# ಕಾಮ್ರೇಡ್ ಶಿವದಾಸ್ ಘೋಷ್


ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ

(ಕಮ್ಯುನಿಸ್ಟ್)

ಕರ್ನಾಟಕ ರಾಜ್ಯ ಸಮಿತಿ

**'Kaarmika Vargada Mahaan Naayaka Comrade Shivadas Ghosh'** is translation of a booklet **'Great leader of the Proletariat Comrade Shibdas Ghosh'** published by SUCI(C)

Edited by:

**K.Radhakrishna**
On behalf of SUCI(C), Karnataka State Committee,
No. 31, 3rd Cross, Malleswaram, Bangalore-560 003
Ph: 080-23561443, 23561257

Website: www.suci.in
Email: karmika.drushtikona@gmail.com

**ಬೆಲೆ : ರೂ. 20/–**

ಮೂರನೇ ಮುದ್ರಣ : ಮಾರ್ಚ್ 8, 2011
ನಾಲ್ಕನೇ ಮುದ್ರಣ : ಜನವರಿ 1, 2014

**ಮುದ್ರಣ:**
**ವಿಘ್ನೇಶ್ವರ ಪ್ರಿಂಟರ್ಸ್,** ನಂ 159, ಬಿಬಿ ಲೇನ್, ಕಾಮಣ್ಣನ ಗುಡಿ ಹತ್ತಿರ,
ಕಾಟನ್ ಪೇಟೆ, ಬೆಂಗಳೂರು – 560 053

# ಪ್ರಕಾಶಕರ ನುಡಿ

ನಮ್ಮ ಪಕ್ಷ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್)ದ ನಾಯಕರು, ಶಿಕ್ಷಕರು, ಮಾರ್ಗದರ್ಶಿಗಳು ಹಾಗೂ ಸ್ಥಾಪಕ ಪ್ರಧಾನ ಕಾರ್ಯದರ್ಶಿಗಳು ಆದ ಕಾಮ್ರೇಡ್ ಶಿವದಾಸ್ ಘೋಷ್‌ರವರು, ಆಗಸ್ಟ್ 5, 1976ರ ಗುರುವಾರ ಸಂಜೆ 7.30ಕ್ಕೆ ಕಲ್ಕತ್ತಾದಲ್ಲಿನ ಕೇಂದ್ರ ಕಮ್ಯೂನ್‌ನಲ್ಲಿ, ತಮ್ಮ 53ನೇ ವಯಸ್ಸಿನಲ್ಲಿ ತೀವ್ರ ಹೃದಯಾಘಾತದಿಂದ ಕೊನೆಯುಸಿರೆಳೆದರು. ದೇಶದ ಮಿಲಿಯಾಂತರ ಶ್ರಮಜೀವಿಗಳ ಅಪಾರ ಕೋರಿಕೆಯ ಮೇರೆಗೆ, ಈ ಮಹಾನ್ ವ್ಯಕ್ತಿಯ ಉಜ್ವಲ ಕ್ರಾಂತಿಕಾರಿ ಜೀವನದ ಕೆಲವು ಅಂಶಗಳನ್ನು– ಅದೂ ಅತ್ಯಂತ ಸಂಕ್ಷಿಪ್ತವಾಗಿ – ನಿರೂಪಿಸಿ, ಪಕ್ಷದ ಕೇಂದ್ರ ಮುಖಪತ್ರಿಕೆ 'ಪ್ರೊಲೆಟೇರಿಯನ್ ಎರಾ' (Proletarian Era) ಅಕ್ಟೋಬರ್ 1, 1976ರ ಸಂಚಿಕೆಯಲ್ಲಿ ಲೇಖನವೊಂದನ್ನು ಪ್ರಕಟಿಸಿತು. ಕಾಮ್ರೇಡ್ ಶಿವದಾಸ್ ಘೋಷ್‌ರವರ ಜೀವನವನ್ನು ಚಿತ್ರಿಸುವುದೆಂದರೆ ನಮ್ಮ ದೇಶದ ಕ್ರಾಂತಿಕಾರಿ ಕಾರ್ಮಿಕವರ್ಗ ಆಂದೋಳನದ, ಎಂದರೆ, ಕಾರ್ಮಿಕವರ್ಗದ ಕ್ರಾಂತಿಕಾರಿ ಪಕ್ಷ ಎಸ್‌ಯುಸಿಐ (ಕಮ್ಯುನಿಸ್ಟ್)ನ ರಚನೆ ಹಾಗೂ ಬೆಳವಣಿಗೆಗಳ ಪರಿಶ್ರಮದಾಯಕ ಇತಿಹಾಸವನ್ನೇ ಚಿತ್ರಿಸುವುದೆಂದರ್ಥ. ಈ ಕಾರ್ಯವನ್ನು ಅಲ್ಪ ಕಾಲಾವಧಿಯಲ್ಲಿ ಈಡೇರಿಸುವುದು ಅಸಾಧ್ಯವಾದುದರಿಂದಲೇ ಪಕ್ಷದ ಕೇಂದ್ರ ಸಮಿತಿ, ಅತಿ ಸಂಕ್ಷಿಪ್ತವಾದರೂ ಈ ಕಿರು ಹೊತ್ತಿಗೆಯ ಮೂಲಕ ಈ ಮಹಾನ್ ಮಾರ್ಕ್ಸ್‌ವಾದಿ ಚಿಂತಕರ ಜೀವನವನ್ನು ಜನತೆಗೆ ಪರಿಚಯಿಸಿತು.

ಕರ್ನಾಟಕದಲ್ಲಿ ಕಾಮ್ರೇಡ್ ಶಿವದಾಸ್ ಘೋಷ್‌ರವರ ಅಸಾಮಾನ್ಯ ಕ್ರಾಂತಿಕಾರಿ ಜೀವನದ ಬಗ್ಗೆ ತಿಳಿದುಕೊಳ್ಳಬೇಕೆಂಬ ಜನತೆಯ ಭಾರೀ ಕೋರಿಕೆಯ ಮೇರೆಗೆ ಮೇಲಿನ ಲೇಖನದ ಕನ್ನಡ ಭಾಷಾಂತರವನ್ನು ಪುಸ್ತಕ ರೂಪದಲ್ಲಿ ಮಾರ್ಚ್, 1982ರಂದು ಹೊರತರಲಾಯಿತು. ಈ ಪುಸ್ತಕದ ಇಂಗ್ಲಿಷ್ ಆವೃತ್ತಿಯ ಎರಡನೇ ಮುದ್ರಣದಲ್ಲಿ ಮಾಡಲಾದ ಕೆಲವು ತಿದ್ದುಪಡಿಗಳನ್ನು ಗಣನೆಗೆ ತೆಗೆದುಕೊಂಡು ಹಿಂದಿನ ಕನ್ನಡ ಭಾಷಾಂತರವನ್ನು ಪರಿಷ್ಕರಿಸಿ, ಪಕ್ಷದ ರಾಜ್ಯ ಸಮಿತಿಯ ಮುಖಪತ್ರಿಕೆ ಕಾರ್ಮಿಕ ದೃಷ್ಟಿಕೋನ (ಸಂಪುಟ–1, ಸಂಚಿಕೆ–6) ಮೇಲಿನ ಲೇಖನವನ್ನು ಪ್ರಕಟಿಸಿತು. ಈ ಸುಧಾರಿತ ಲೇಖನವನ್ನೇ ಪುಸ್ತಕದ ಎರಡನೇ ಮುದ್ರಣವಾಗಿ ಹೊರತರಲಾಯಿತು. ಇದೀಗ ಪುಸ್ತಕದ ನಾಲ್ಕನೇ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಅನುವಾದದಲ್ಲಿ ಏನೇ ತಪ್ಪುಗಳಿದ್ದರೂ ಅದರ ಹೊಣೆ ಅನುವಾದಕರಿಗೆ ಸೇರಿದ್ದು.

**ಕೆ.ರಾಧಾಕೃಷ್ಣ**

ರಾಜ್ಯ ಕಾರ್ಯದರ್ಶಿ,
ಎಸ್‌ಯುಸಿಐ(ಸಿ)

ಜನವರಿ 1, 2014

31, 3ನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು– 560 003

# ಕಾರ್ಮಿಕವರ್ಗದ ಮಹಾನ್ ನಾಯಕ

# ಕಾಮ್ರೇಡ್ ಶಿವದಾಸ್ ಘೋಷ್

ಈ ಯುಗದ ಒಬ್ಬ ಪ್ರಮುಖ ಮಾರ್ಕ್ಸ್‌ವಾದಿ ಚಿಂತಕರು ಹಾಗೂ ತತ್ವಜ್ಞಾನಿಗಳಾದ ಕಾಮ್ರೇಡ್ ಶಿವದಾಸ್ ಘೋಷ್‌ರವರ ಆಕಸ್ಮಿಕ ಹಾಗೂ ಅಕಾಲ ನಿಧನದಿಂದಾಗಿ ಇಡೀ ಜಗತ್ತಿನ ಕಾರ್ಮಿಕವರ್ಗವು ಮಹಾನ್ ನಾಯಕರು ಹಾಗೂ ಶಿಕ್ಷಕರೊಬ್ಬರನ್ನು ಕಳೆದುಕೊಂಡಿದೆ. ತಮ್ಮ ಜೀವನದ ಕೊನೆಯ ಉಸಿರಿನವರೆಗೂ ಅವರು ಮಾರ್ಕ್ಸ್‌ವಾದ–ಲೆನಿನ್‌ವಾದದ ಉತ್ಕೃಷ್ಟ ಪತಾಕೆಯನ್ನು ಎತ್ತಿಹಿಡಿದು ಎಲ್ಲಾ ರೀತಿಯ ವಿರೂಪ, ಪಲ್ಲಟನೆಗಳಿಂದ ಅದನ್ನು ಸಂರಕ್ಷಿಸಿದರು ಹಾಗೂ ಬೂರ್ಜ್ವಾ ವಿಚಾರಧಾರೆಯ ವಿವಿಧ ಪಂಥಗಳ ದಾಳಿಗಳ ವಿರುದ್ಧ ಅವಿರತ ಹೋರಾಟವನ್ನು ನಡೆಸಿದರು.

ರಾಷ್ಟ್ರೀಯ, ಅಂತರರಾಷ್ಟ್ರೀಯ ಕ್ಷೇತ್ರಗಳಲ್ಲಿ ಕಾರ್ಮಿಕವರ್ಗದ ವಿಮುಕ್ತಿ ಹೋರಾಟಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯಾಗಲೀ, ವಿಷಯವಾಗಲೀ ಅದರಬಗ್ಗೆ ಅವರ ಪ್ರಗಾಢವಾದ ವಿವೇಕದ ಬೆಳಕು ಬೀಳದೇ ಉಳಿಯಲಿಲ್ಲ. ವಿಜ್ಞಾನ – ತತ್ವಶಾಸ್ತ್ರಗಳನ್ನೊಳಗೊಂಡಂತೆ ಜೀವನದ ಎಲ್ಲಾ ರಂಗಗಳನ್ನಾವರಿಸಿದಂತಹ ಸಮಗ್ರ ಜ್ಞಾನದ ಯಾವ ವಿಭಾಗವನ್ನೂ ಸುಲಭವಾಗಿ ಗ್ರಹಿಸಬಲ್ಲ ಅವರ ಸಾಮರ್ಥ್ಯಕ್ಕೆ ಎಟುಕದೆ ಇರಲಿಲ್ಲ. ಲೆನಿನ್ ನಂತರದ ಕಾಲದಲ್ಲಿ ಕಾಣಿಸಿಕೊಂಡ ಜೀವನದ ಹೊಸ ಹೊಸ ಸಮಸ್ಯೆಗಳನ್ನು ಬಗೆಹರಿಸುವ ಗತಿಯಲ್ಲಿ ಕಾಮ್ರೇಡ್ ಶಿವದಾಸ್ ಘೋಷರು ಮಾರ್ಕ್ಸ್‌ವಾದ–ಲೆನಿನ್‌ವಾದದ ತಿಳುವಳಿಕೆಯನ್ನು ಬೆಳೆಸಿ, ವಿಸ್ತರಿಸಿ ಸಂಪದ್ಭರಿತಗೊಳಿಸಿದರು ಹಾಗೂ ಅದರ ಜ್ಞಾನಭಂಡಾರಕ್ಕೆ ನಿರ್ದಿಷ್ಟ ಹೊಸಕಾಣಿಕೆಯನ್ನಿತ್ತು ಅದನ್ನು ಮತ್ತಷ್ಟು ಉನ್ನತ ಮಟ್ಟಕ್ಕೇರಿಸಿದರು. ಪ್ರಸಕ್ತ ಯುಗದಲ್ಲಿ ಕಾಮ್ರೇಡ್ ಶಿವದಾಸ್ ಘೋಷ್‌ರವರು ವಿಶ್ವ ಕಾರ್ಮಿಕವರ್ಗ ಕ್ರಾಂತಿಯ ಜೀವಂತ ಸಂಕೇತವಾಗಿದ್ದರು.

ಮಾರ್ಕ್ಸ್‌ವಾದ–ಲೆನಿನ್‌ವಾದವು ಅವರಿಗೆ ಒಂದು ಸಂಪೂರ್ಣವಾದ ಹಾಗೂ ಸಮಗ್ರವಾದ ವಿಜ್ಞಾನವಾಗಿತ್ತು, ಜೀವನದ ಒಂದು ತತ್ವಶಾಸ್ತ್ರವಾಗಿತ್ತು. ಜೀವನಪರ್ಯಂತ ಅವರು ಅದನ್ನು ತಮ್ಮ ಬದುಕಿನ ಪ್ರತಿಯೊಂದು ವಿಷಯದ ಕುರಿತಾಗಿಯೂ ಕ್ರಿಯೆಯ ಮಾರ್ಗದರ್ಶಕವನ್ನಾಗಿ ಬಳಸಿದರು.ಜೀವನದ ಪ್ರತಿಯೊಂದು ರಂಗದಲ್ಲೂ ಮಾರ್ಕ್ಸ್‌ವಾದ –ಲೆನಿನ್‌ವಾದವನ್ನು ಅಳವಡಿಸಲು ತಮ್ಮ ಪ್ರಜ್ಞಾವಂತ ಹಾಗೂ ಅವಿರತ ಹೋರಾಟದ ಮೂಲಕ ಅವರು ಗಳಿಸಿಕೊಂಡ ಕಾರ್ಮಿಕವರ್ಗದ ಸಾಂಸ್ಕೃತಿಕ ಹಾಗೂ

ನೈತಿಕ ಮಟ್ಟದ ಔನ್ನತ್ಯವನ್ನು ಗ್ರಹಿಸಿಕೊಳ್ಳುವುದಾಗಲಿ, ಅವರ ಪ್ರಗಾಢ ಜ್ಞಾನ ಹಾಗೂ ವಿವೇಕದ ಆಳವನ್ನು ಸರಿಯಾಗಿ ಕಲ್ಪಿಸಿಕೊಳ್ಳುವುದಾಗಲಿ, ಅವರಿಗಿಂತ ಕಡಿಮೆ ಜ್ಞಾನವನ್ನು ಹಾಗೂ ಸಾಪೇಕ್ಷವಾಗಿ ಕಡಿಮೆ ಮಟ್ಟದ ಕ್ರಾಂತಿಕಾರಿ ಗುಣವನ್ನು ಹೊಂದಿರುವ ನಮಗೆ ಕಷ್ಟದಾಯಕ. ಅವರ ಬಗ್ಗೆ ನಮ್ಮ ತಿಳಿವಳಿಕೆ ಎಷ್ಟೇ ಇರಲಿ, ಅದನ್ನು ಭಾಷೆಯಲ್ಲಿ ವ್ಯಕ್ತಪಡಿಸುವುದು ಇನ್ನೂ ಕಷ್ಟಕರ. ಆದರೆ ನಮ್ಮ ದೇಶದ ಮಿಲಿಯಾಂತರ ಶ್ರಮಜೀವಿಗಳ ಗಾಢವಾದ ಭಾವನೆ ಹಾಗೂ ಪ್ರಾಮಾಣಿಕ ಬಯಕೆಗಳಿಗೆ ಸ್ಪಂದಿಸುತ್ತಾ ಅವರ ಮಹೋನ್ನತ ಕ್ರಾಂತಿಕಾರಿ ಜೀವನ ಹಾಗೂ ಚಾರಿತ್ರ್ಯವನ್ನು ಬಿಂಬಿಸುವ ಸ್ಥೂಲಚಿತ್ರವೊಂದನ್ನು ಈ ಪುಸ್ತಕದ ಮೂಲಕ – ಅದೂಸಹ ಬಹಳ ಸಂಕ್ಷಿಪ್ತವಾಗಿ – ಮುಂದಿಡಲು ಪ್ರಯತ್ನಿಸಿದ್ದೇವೆ. ಈ ಮಹಾನ್ ಕ್ರಾಂತಿಕಾರಿಯ ಜೀವನ, ಗುಣನಡತೆ ಹಾಗೂ ಅಮರ ಬೋಧನೆಗಳು, ಕಾರ್ಮಿಕವರ್ಗದ ಹಲವು ಪೀಳಿಗೆಗಳಿಗೆ ತಮ್ಮ ವಿಮುಕ್ತಿಯ ಹೋರಾಟದಲ್ಲಿ ಸ್ಫೂರ್ತಿದಾಯಕವಾದ ಜೀವಂತ ಸಂಕೇತವಾಗಿಯೂ, ನಂದಾದೀಪವಾಗಿಯೂ ಬೆಳಕು ಬೀರುತ್ತವೆ; ಅಲ್ಲದೆ ಸತತ ಹಾಗೂ ನಿರಂತರ ಹೋರಾಟಗಳ ಮೂಲಕ ನಾವು ಗಳಿಸಿಕೊಳ್ಳುವ ಹೊಸ ಹೊಸ ಅನುಭವಗಳ ಬೆಳಕಿನಲ್ಲಿ ಅವರ ಮಹಾನ್ ಜೀವನ ಬೋಧನೆಗಳ ಬಗ್ಗೆ ನಮ್ಮೊಳಗಿನ ತಿಳಿವಳಿಕೆ ಸಹ ಉನ್ನತಮಟ್ಟದಿಂದ ಇನ್ನೂ ಉನ್ನತ ಮಟ್ಟಕ್ಕೆ ಏರುತ್ತದೆ ಎಂಬುದನ್ನೂ ಸಹ ನಾವು ಈ ಸಂದರ್ಭದಲ್ಲಿ ಗಮನದಲ್ಲಿರಿಸಿಕೊಂಡಿದ್ದೇವೆ.

ತಮ್ಮ ಜೀವನದಲ್ಲಿ ಅವಿರತ ಹೋರಾಟಗಳ ಮೂಲಕ ಅವರು ನಮ್ಮ ನೆಲದಲ್ಲಿ ಕಟ್ಟಿದ, ಕಾರ್ಮಿಕವರ್ಗದ ಏಕೈಕ ಕ್ರಾಂತಿಕಾರಿ ಪಕ್ಷವಾದ ಎಸ್‌ಯುಸಿಐನಲ್ಲಿ ಅವರ ಎಲ್ಲಾ ಚಿಂತನೆಗಳೂ ವಿಚಾರಗಳೂ ಮೂರ್ತಗೊಂಡಿವೆ. ಎಸ್‌ಯುಸಿಐ* ನ ಇತಿಹಾಸವೆಂದರೆ ಕಾಮ್ರೇಡ್ ಶಿವದಾಸ್ ಘೋಷ್‌ರ ಮಹಾನ್ ಕ್ರಾಂತಿಕಾರಿ ಜೀವನ ಹೋರಾಟಗಳ ಇತಿಹಾಸ. ಅವರು ತಮ್ಮನ್ನೇ ಕ್ರಾಂತಿ, ವರ್ಗ ಹಾಗೂ ಪಕ್ಷ ಎಂದರೆ, ಎಸ್‌ಯುಸಿಐನೊಂದಿಗೆ ಸಂಪೂರ್ಣವಾಗಿ ವಿಲೀನಗೊಳಿಸಿಕೊಂಡಿದ್ದರು. ಪಕ್ಷದ ಸಾಮೂಹಿಕ ಜ್ಞಾನವೂ ನಾಯಕತ್ವವೂ ಅವರಲ್ಲಿ ಮೂರ್ತರೂಪವನ್ನು, ವ್ಯಕ್ತಿರೂಪವನ್ನು ಪಡೆದುಕೊಂಡಿದ್ದವು.

"ಕೇವಲ ಕ್ರಾಂತಿಯನ್ನು ಕುರಿತು ಮಾತನಾಡುವುದು ಕ್ರಾಂತಿಕಾರಿ ಪ್ರಜ್ಞೆಯಲ್ಲ. ಹಾಗೆಯೇ ಕಾರ್ಮಿಕವರ್ಗದ ಪರವಾಗಿ ಮಾತನಾಡುವುದೂ ಕಾರ್ಮಿಕವರ್ಗದ ಪ್ರಜ್ಞೆಯಲ್ಲ.

***ಹಿಂದೆ ಎಸ್‌ಯುಸಿಐ ಎಂದಿದ್ದ ಪಕ್ಷದ ಹೆಸರನ್ನು 2010ರಲ್ಲಿ ನಡೆದ ಪಕ್ಷದ 2ನೇ ಮಹಾಧಿವೇಶನದಲ್ಲಿ ಎಸ್‌ಯುಸಿಐ(ಸಿ) ಎಂದು ತಿದ್ದುಪಡಿ ಮಾಡಲಾಯಿತು.**

ಸೂಕ್ತ ಕ್ರಾಂತಿಕಾರಿ ಪ್ರಜ್ಞೆಯೆಂದರೆ ಸೂಕ್ತ ಕಾರ್ಮಿಕವರ್ಗ ಪ್ರಜ್ಞೆ ಮತ್ತು ಸೂಕ್ತ ಕಾರ್ಮಿಕವರ್ಗ ಪ್ರಜ್ಞೆಯೆಂದರೆ ಸೂಕ್ತ ಕಾರ್ಮಿಕವರ್ಗ ಪಕ್ಷದ ಪ್ರಜ್ಞೆ" ಎಂದು ಅವರು ನಮಗೆ ಕಲಿಸಿಕೊಟ್ಟರು.

ಹದಿಮೂರರ ಎಳೆ ವಯಸ್ಸಿನಲ್ಲಿಯೇ ಪರಾಧೀನತೆಯ ಕಾವೂ, ಅವಮಾನವೂ ಅವರಲ್ಲಿ ಮೂಡಿದಾಕ್ಷಣವೇ ಈ ಕ್ರಾಂತಿಕಾರಿಯ ಜೀವನದಲ್ಲಿ ಕಠಿಣವಾದ ಹಾಗೂ ಅವಿಶ್ರಾಂತವಾದ ಹೋರಾಟ ಪ್ರಾರಂಭವಾಯಿತು ಮತ್ತು ಅವರಲ್ಲಿ ಈ ಒಂದು ಪ್ರತ್ಯಕ್ಷೀಕರಣವು ಅಂಕುರಿಸಿತು. ಅಸಂಖ್ಯಾತ ಹುತಾತ್ಮರ ಧೀರೋದಾತ್ತ ಬಲಿದಾನದಿಂದ ಪ್ರಾಪ್ತಿಯಾದ ಸ್ವಾತಂತ್ರ್ಯದ ಫಲವನ್ನೆಲ್ಲಾ ಬಂಡವಾಳಶಾಹಿ ವರ್ಗ ಸೂರೆಗೊಳ್ಳುವುದೆಂಬ ಅರಿವು ಮೂಡಿ ಅವರ ಹೃದಯಾಂತರಾಳವು ನೋವಿನಿಂದಲೂ ವೇದನೆಯಿಂದಲೂ ತುಂಬಿತು. ಇದರಿಂದಾಗಿ ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಜ್ಞಾಪೂರ್ವಕ ಪಾಲ್ಗೊಳ್ಳುವಿಕೆಯಿಂದ ಗಳಿಸಿದ ಅನುಭವಗಳಿಂದಾಗಿ ಅವರು ಈ ತೀರ್ಮಾನಕ್ಕೆ ಬಂದರು – ಮರ್ದಿತ ಹಾಗೂ ಶೋಷಿತ ಜನತೆ ಅವರ ವರ್ಗ ಸಲಕರಣೆಯಾದ ಕಾರ್ಮಿಕವರ್ಗ ಪಕ್ಷವನ್ನು ಹೊಂದದಿದ್ದರೆ ಎಂದಿಗೂ ವಿಮುಕ್ತಿಯನ್ನು ಗಳಿಸಲಾರರು. ಆದ್ದರಿಂದಲೇ ಅವರು ಮತ್ತೆ ಮತ್ತೆ ನಮ್ಮ ದೇಶದ ಪ್ರಜಾಸತ್ತಾತ್ಮಕ ಸಮೂಹ ಚಳುವಳಿಗಳ ಮುಂದೆ ಈ ಮುಖ್ಯ ವಿಚಾರವನ್ನು ಮಂಡಿಸಿದರು: "ಸಮಾಜದ ರೈತ–ಕಾರ್ಮಿಕರ ಅತೃಪ್ತಿಯಿಂದ ಕಾಲಕಾಲಕ್ಕೆ ಕ್ರಾಂತಿಕಾರಿ ಪ್ರವಾಹವು ಅಲೆಗಳ ಮೇಲೆ ಅಲೆಗಳಂತೆ ಉಕ್ಕಿ ಬರಲು ಯತ್ನಿಸುತ್ತದೆ; ಅದು ಸಿಡಿದು ಹೊರಹೊಮ್ಮಲು ಯತ್ನಿಸುತ್ತದೆ. ಸಮಾಜದೊಳಗೆ ಬೆಂದು ಪಕ್ವವಾದ ದ್ವಂದ್ವ ಕ್ಲೇಶಗಳು ಕಾಲಕಾಲಕ್ಕೆ ಹೊರಸೂಸಿ ಈ ವ್ಯವಸ್ಥೆಯ ಮೂಲಭೂತ ಬದಲಾವಣೆಗಾಗಿ ಆಗ್ರಹಪಡಿಸುತ್ತವೆ; ಮಾನವನ ಮನಸ್ಸಾಕ್ಷಿಗೆ ಅತ್ಯಂತ ಉತ್ಕಟಭಾವದಿಂದ ಮನವಿ ಮಾಡುತ್ತವೆ. ಮಾನವ ಪ್ರಜ್ಞೆಯನ್ನು ಪ್ರೇರೇಪಿಸುತ್ತವೆ ಹಾಗೂ ಕ್ರಾಂತಿಗಾಗಿ ಆಗ್ರಹಿಸುತ್ತವೆ. ಆದರೆ ಕ್ರಾಂತಿ ಘಟಿಸುವುದಿಲ್ಲ. ಮತ್ತೆಮತ್ತೆ ಕ್ರಾಂತಿಕಾರಿ ಪ್ರವಾಹ ಹಿಮ್ಮೆಟ್ಟುತ್ತದೆ, ದಿಕ್ಕಾಪಾಲಾಗುತ್ತದೆ. ಮತ್ತೆ ಮತ್ತೆ ಪ್ರತಿಗಾಮಿ ಶಕ್ತಿಗಳು ಲಾಭಗಳಿಸುತ್ತವೆ. ಒಂದು ಕ್ರಾಂತಿಕಾರಿ ಪಕ್ಷ, ನಾಯಕತ್ವದ ಅವಶ್ಯಕ ಬಲದೊಂದಿಗೆ ಹೊರಹೊಮ್ಮುವವರೆಗೆ ಕ್ರಾಂತಿ ಕಾಯಬೇಕಾಗುತ್ತದೆ." ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ಗಳಿಸಿದ ಪ್ರಜ್ಞಾಮಟ್ಟವನ್ನಾಧರಿಸಿ ಈ ಸತ್ಯ ಅವರಲ್ಲಿ ಎಷ್ಟರಮಟ್ಟಿಗೆ ಪ್ರತ್ಯಕ್ಷೀಕರಣವಾಯಿತೋ ಅದು ಅನಂತರ ನಿರಂತರ ಪ್ರಜ್ಞಾಪೂರ್ವಕ ಹೋರಾಟಗಳಿಂದ ಅರಳಿ, ಅವರು ಈ ನಾಡಿನಲ್ಲಿ ಕಟ್ಟಿದ ನೈಜ ಕಮ್ಯುನಿಸ್ಟ್ ಪಕ್ಷವಾದ ಎಸ್‌ಯುಸಿಐ ಮೂಲಕ ಪರಿಪಕ್ವವಾದ, ಮೂರ್ತವಾದ ಸ್ವರೂಪವನ್ನು ತಳೆಯಿತು.

ಮಿಲಿಯಾಂತರ ಶ್ರಮ ಜೀವಿಗಳ ಬಗ್ಗೆ ಅವರಲ್ಲಿ ಬತ್ತಿಹೋಗಲಾರದಷ್ಟು ಪ್ರೇಮವಿತ್ತು. "ಒಬ್ಬ ಕಮ್ಯುನಿಸ್ಟನಿಗೆ ಜನತೆಯನ್ನು ಪ್ರೀತಿಸುವುದರಲ್ಲಿ ಯಾವ ಕೃತಕತೆಯೂ ಇಲ್ಲ. ಅವನಲ್ಲಿ ಆಪ್ತರು, ಆತ್ಮೀಯರಿಗೆಂದೇ ಪ್ರತ್ಯೇಕವಾದ ಮಮತೆ ಇರುವುದಿಲ್ಲ. ವಾಸ್ತವದಲ್ಲಿ ಅವರ ಮೇಲಿನ ಪ್ರೀತಿ, ವಾತ್ಸಲ್ಯಗಳು ಅವನಲ್ಲಿ ಜನರ ಮೇಲಿನ ಪ್ರೇಮವಾಗಿ ವ್ಯಕ್ತವಾಗುತ್ತವೆ" ಎಂದು ಅವರು ನಮಗೆ ಕಲಿಸಿಕೊಟ್ಟರು. ಕಾರ್ಮಿಕ ವರ್ಗದ ಬಗ್ಗೆ ಕಾಮ್ರೇಡ್ ಘೋಷ್‌ರವರಿಗಿದ್ದಂತಹ ಅಮಿತವಾದ ಪ್ರೀತಿಯು ಅವರಲ್ಲಿದ್ದ ಪ್ರೇಮ, ಮಮತೆ, ಅನುಕಂಪ, ಕರುಣೆಗಳಂತಹ ಆಳವಾದ, ಸೂಕ್ಷ್ಮವಾದ ಭಾವನೆಗಳನ್ನು ವ್ಯಕ್ತಿವಾದದ ಸಂಕುಚಿತ ಇತಿಮಿತಿಗಳಿಂದ ಪೂರ್ಣವಾಗಿ ಮುಕ್ತಗೊಳಿಸಿ, ಕ್ರಾಂತಿಯ ಧ್ಯೇಯದೊಂದಿಗೆ ಸಂಪೂರ್ಣವಾಗಿ ಐಕ್ಯಗೊಳಿಸಿತು. ಅವರ ಹೃದಯದ ಬಾಗಿಲು ಎಂದೂ ಎಲ್ಲರಿಗಾಗಿ ವಿಶಾಲವಾಗಿ ತೆರೆದಿತ್ತು. ಸಾಮಾನ್ಯ ರೈತ–ಕಾರ್ಮಿಕರಾದಿಯಾಗಿ ಎಲ್ಲರೂ ಕೂಡ ತಮ್ಮ ಜೀವನದ ಅನೇಕ ಸಮಸ್ಯೆಗಳೊಂದಿಗೆ ಆಗಾಗ್ಗೆ ಅವರ ಬಳಿ ಬರುತ್ತಿದ್ದರು. ಅನಾರೋಗ್ಯದಿಂದ ಬಳಲುತ್ತಿದ್ದಾಗಲೂ ಸಹ, ಅವರು ಹಗಲು ರಾತ್ರಿ ಸಹನೆಯಿಂದ ಅವರೆಲ್ಲರ ಸಮಸ್ಯೆಗಳನ್ನು ಗಂಟೆಗಟ್ಟಳೆ ಕೇಳಿ ಮಾರ್ಗದರ್ಶನ ನೀಡುತ್ತಿದ್ದರು. ಕಾಮ್ರೇಡರ ಸಮಸ್ಯೆಗಳ ಸೂಕ್ಷ್ಮಾತಿಸೂಕ್ಷ್ಮ ಅಂಶಗಳೂ ಕೂಡ ಅವರ ಅತ್ಯಂತ ಗಂಭೀರ ಗಮನವನ್ನು ಸೆಳೆಯುತ್ತಿದ್ದವು. ಹೀಗೆ ಜನರ ಸಮಸ್ಯೆಗಳ ಬಗ್ಗೆ ಚರ್ಚಿಸಿ ವಿಶ್ಲೇಷಿಸುತ್ತಾ, ತಮ್ಮ ಗಾಢ ಮಮತೆಯ ಮೃದು ಸ್ಪರ್ಶದಿಂದ ಕ್ಷಣಮಾತ್ರದಲ್ಲಿ ಅವರ ನೋವು ಸಂಕಟಗಳ ಕುರುಹೂ ಉಳಿಯದಂತೆ ನಿವಾರಿಸುತ್ತಿದ್ದರು. ಅವರ ಪ್ರೇಮದ ಗುಣಸ್ವಭಾವವೇ ವಿಭಿನ್ನವಾದುದು. ಅವರ ಪ್ರೇಮದ ಮೃದುಸ್ಪರ್ಶ ಯಾರನ್ನೇ ಆಗಲಿ ಭಿನ್ನಮಾದರಿಯ ಕ್ರಾಂತಿಕಾರಿಯಾಗಿ ಪರಿವರ್ತಿಸಿ ಅವರಲ್ಲಿ ಉನ್ನತ ಮಟ್ಟದ ಸಂಸ್ಕೃತಿ ನೈತಿಕತೆಗಳನ್ನು ರೂಪಿಸುತ್ತಿತ್ತು.

ಹೀಗೆ ಕಾಮ್ರೇಡ್ ಘೋಷ್‌ರವರು ಪಕ್ಷದ ಕಾಮ್ರೇಡರ ಮೇಲೆ ಅಗಾಧವಾದ ಪ್ರೇಮ ಮಮತೆಗಳ ಸುರಿಮಳೆ ಸುರಿಯುತ್ತಿದ್ದರು. ಅವರ ಪ್ರೇಮದ ಈ ಸ್ಪರ್ಶವನ್ನು ಅನುಭವಿಸದವರು ಯಾರೂ ಅದರ ಆಳವನ್ನೂ, ಹಿರಿಮೆಯನ್ನೂ ಅರಿಯಲಾರರು. ಅವರು ಹೇಳುತ್ತಿದ್ದರು: ಕಮ್ಯುನಿಸ್ಟರಿಗೂ ಪ್ರೇಮ, ಮಮತೆಗಳ ಅವಶ್ಯಕತೆಯಿದೆ. ಅವರೂ ಮಾರ್ದವತೆ, ಸ್ನೇಹ, ಅನುಕಂಪಗಳನ್ನು ಬಯಸುತ್ತಾರೆ; ಆದರೆ ಇದು ಯಾವುದನ್ನೂ ತಮ್ಮ ಕ್ರಾಂತಿಕಾರಿ ಜೀವನದ ಪರಿಧಿಯಿಂದಾಚೆ ಗಳಿಸಲು ಅವರು ಇಚ್ಛಿಸುವುದಿಲ್ಲ. ಅವರು ಲೆಕ್ಕವಿಲ್ಲದಷ್ಟು ಸಲ ಹೇಳುತ್ತಿದ್ದರು: ನನ್ನ ಕ್ರಾಂತಿಕಾರಿ ಜೀವನದಾದ್ಯಂತ ನಾನು ಜನತೆಯಿಂದ ಹಾಗೂ ನನ್ನ ಪಕ್ಷದ ಕಾಮ್ರೇಡರಿಂದ ಪಡೆದ ಪ್ರೇಮ ಮತ್ತು ಮಮತೆ ಅನನ್ಯ ಮತ್ತು ನಿರುಪಮ.

ಮಾನವರಲ್ಲಿನ ಉದಾತ್ತ ಮೌಲ್ಯಗಳ ಕುರಿತಾದ ವಿವೇಚನೆ ಅವರಲ್ಲಿ ಎಷ್ಟೊಂದು ಗಾಢವಾಗಿತ್ತು! ಯಾರಲ್ಲಾದರೂ ಉದಾತ್ತ ಮೌಲ್ಯಗಳ ಸೂಕ್ಷ್ಮಾತಿಸೂಕ್ಷ್ಮ ಅಂಶಗಳನ್ನು ಕಂಡರೆ ಎಂತಹ ಪ್ರತಿಕೂಲ ಕಷ್ಟದ ಪರಿಸ್ಥಿತಿಯ ನಡುವೆಯೂ ಸಹ ಅದನ್ನು ಅತ್ಯಂತ ಜಾಗರೂಕತೆಯಿಂದ ಕಾಪಾಡಲು ಅವರು ಯತ್ನಿಸುತ್ತಿದ್ದರು. ಅದೇ ರೀತಿ ಯಾರಲ್ಲಾದರೂ ಒಮ್ಮೆ ಗಳಿಸಿದ ಉನ್ನತ ನೈತಿಕ–ಸಾಂಸ್ಕೃತಿಕ ಮಟ್ಟದಲ್ಲಿ ಕಿಂಚಿತ್ತು ಲೋಪ ಕಂಡು ಬಂದರೂ ಅವರ ಹೃದಯದಲ್ಲಿ ಬಹಳ ವೇದನೆ ಉಂಟಾಗುತ್ತಿತ್ತು ! ಅಂತಹ ಘಟನೆ ಅವರಲ್ಲಿ ಎಂತಹ ನೋವು–ಸಂಕಟಗಳನ್ನು ಉಂಟುಮಾಡುತ್ತಿತ್ತು! ಮಾನವ ಮೌಲ್ಯಗಳ ಕುರಿತಾದ ಈ ಅಪಾರ ಗುಣಗ್ರಹಣ ಶಕ್ತಿಯಿಂದಾಗಿ ಅವರು ಯಾವಾಗಲೂ ಎಷ್ಟು ಸಹನೆಯಿಂದ ಕಾಮ್ರೇಡರನ್ನು ಅವರ ಇತಿಮಿತಿ ನ್ಯೂನತೆಗಳಿಂದ ಮುಕ್ತಗೊಳಿಸಲು ಎಷ್ಟು ಪ್ರೇಮದಿಂದ ಯತ್ನಿಸುತ್ತಿದ್ದರು! ತಮ್ಮ ವಿರೋಧಿಗಳ ವಿರುದ್ಧ ಹೋರಾಡುವಾಗಲೂ ಸಹ ಅವರಲ್ಲಿ ಏನಾದರೂ ಮೌಲ್ಯಗಳು ಕಂಡುಬಂದರೆ ಅವುಗಳಿಗೆ ಸೂಕ್ತ ಮನ್ನಣೆಯನ್ನು ನೀಡಲು ಅವರು ಎಂದೂ ಮರೆಯುತ್ತಿರಲಿಲ್ಲ. ಯಾರದೇ ಲೋಪದೋಷಗಳನ್ನು ಕುರಿತು ಚರ್ಚಿಸುವಾಗ  ಅವರು ಯಾವಾಗಲೂ ಉನ್ನತ ಸಾಂಸ್ಕೃತಿಕ–ನೈತಿಕ ಮಟ್ಟವನ್ನು ಪ್ರತಿಬಿಂಬಿಸುತ್ತಿದ್ದರು. “ನೀವು ಯಾರನ್ನಾದರೂ ಟೀಕಿಸುವ ಮೊದಲು ನಿಮ್ಮನ್ನೇ ಅವರ ಸ್ಥಾನದಲ್ಲಿರಿಸಿಕೊಂಡು ನೋಡಿ. ಇಲ್ಲದಿದ್ದರೆ ನಿಮ್ಮ ಟೀಕೆ ಎಂದೂ ನಿರ್ವೈಯಕ್ತಿಕವಾಗದು” ಎಂದು ಅವರು ನಮಗೆ ಕಲಿಸಿದರು. ಅವರು ಹೇಳುತ್ತಿದ್ದರು: “ಮಾನವನಲ್ಲಿ ಸದ್ಗುಣ ದುರ್ಗುಣಗಳೆರಡೂ ಇವೆ. ಅವನ ಸದ್ಗುಣಗಳನ್ನು ಬೆಳೆಸಿ ದುರ್ಗುಣಗಳನ್ನು ನಿರ್ಮೂಲನಗೊಳಿಸಲು ನೀವು ನಿಜವಾಗಿಯೂ ಬಯಸಿದಲ್ಲಿ, ಅವನ ಸದ್ಗುಣಗಳನ್ನು ಸತತವಾಗಿ ಪ್ರೋತ್ಸಾಹಿಸಬೇಕು, ದುರ್ಗುಣಗಳ ಬಗ್ಗೆ  ಪೀಡಿಸುವುದಲ್ಲ. ಆಗ ಮಾತ್ರವೇ ಅವನ ಸದ್ಗುಣಗಳು ಹೆಚ್ಚುಹೆಚ್ಚಾಗಿ ಅಭಿವೃದ್ಧಿ ಹೊಂದಿ ಅವನು ದುರ್ಗುಣಗಳಿಂದ ಮುಕ್ತನಾಗುತ್ತಾನೆ.” ವಿಮರ್ಶಾ ವಿಧಾನದ ಬಗ್ಗೆ ಅವರು ಹಲವು ಬಾರಿ ಪಕ್ಷದ ಕಾರ್ಯಕರ್ತರಿಗೆ ಹೇಳುತ್ತಿದ್ದರು: “ಇತರರನ್ನು ಟೀಕಿಸುವ ಮೊದಲು ಒಬ್ಬ ಕ್ರಾಂತಿಕಾರಿ ತನ್ನನ್ನೇ ತಾನು ಟೀಕಿಸಿಕೊಳ್ಳಬೇಕು. ಆತ್ಮವಿಮರ್ಶೆಯ ಸ್ಫೂರ್ತಿಯನ್ನಾಧರಿಸಿದ ಟೀಕೆ ಮಾತ್ರವೇ ಕ್ರಾಂತಿಯ ಹಿತಾಸಕ್ತಿಯನ್ನು ಪೂರೈಸುತ್ತದೆ.” ಅವರು ನುಡಿಯುತ್ತಿದ್ದರು: ನಮ್ಮನ್ನು ಟೀಕಿಸುವವರು ಕಾಮ್ರೇಡ್ ಆಗಿರಲಿ ಅಥವಾ ಹೊರಗಿನವರಾಗಿರಲಿ ಅಥವಾ ವೈರಿಯೇ ಆಗಿರಲಿ – ನಾವು ಅವರನ್ನು ನಮ್ಮ ಶಿಕ್ಷಕರನ್ನಾಗಿ ಪರಿಗಣಿಸುತ್ತೇವೆ.” ಹಿಂದಿನ ಮಹಾನ್ ವ್ಯಕ್ತಿಗಳ ಬಗ್ಗೆ ಅವರಿಗೆ ಗಾಢವಾದ ಗೌರವವಿತ್ತು. ಅವರನ್ನು ಗೌರವಿಸುವಂತೆ ನಮಗೂ ಕೂಡ ಹೇಳುತ್ತಿದ್ದರು. ರಾಷ್ಟ್ರವು ಅವರನ್ನು

ಮರೆಯುತ್ತಿದೆಯೆಂದೂ ಅವರನ್ನು ಶೂನ್ಯಕ್ಕೆ ತಳ್ಳಲಾಗುತ್ತಿದೆಯೆಂದೂ ಗಮನಿಸಿದಾಗ ಅವರ ಕಂಠ ಭಾವೋದ್ವೇಗ, ವೇದನೆಗಳಿಂದ ಗದ್ಗದಿತವಾಗುತ್ತಿತ್ತು. ಅವರು ನುಡಿದರು: "ಈ ಮಹಾನ್ ವ್ಯಕ್ತಿಗಳನ್ನು ಮರೆತಿರುವುದರಿಂದಲೇ ದೇಶದ ರಾಜಕೀಯ ಚಳುವಳಿ, ಸಮೂಹ ಚಳುವಳಿಗಳಲ್ಲಿ ಹಾಗೂ ಕಲೆ–ಸಾಹಿತ್ಯ ಕ್ಷೇತ್ರಗಳಲ್ಲೂ ಸಹ ನೈತಿಕ–ಸಾಂಸ್ಕೃತಿಕ ಮಟ್ಟ ಕ್ರಮೇಣವಾಗಿ ಕುಸಿದಿದೆ. ಒಮ್ಮೆ ಗಮನಾರ್ಹ ಔನ್ನತ್ಯವನ್ನು ತಲುಪಿದ ಆ ಮಟ್ಟ ಮಣ್ಣುಗೂಡಿದೆ. ಆದ್ದರಿಂದ ನಾವು ಬೇರಿಲ್ಲದವರಾಗಿದ್ದೇವೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಗಳಿಸಿಕೊಂಡ ಶ್ರೀಮಂತ ಸಂಸ್ಕೃತಿಯೊಂದಿಗೆ ಸಂಬಂಧವನ್ನು ಮುಂದುವರೆಸುವಲ್ಲಿ ನಾವು ವಿಫಲರಾಗುತ್ತಿದ್ದೇವೆ. ಪ್ರಪಂಚದಿಂದ ಸುಮಧುರವಾದ ಪದಪುಂಜಗಳನ್ನು ನಾವು ಯಥೇಚ್ಛವಾಗಿ  ಆರಿಸಿಕೊಂಡಿದ್ದೇವೆ. ಆದರೂ ನಮ್ಮ ದೇಶದಲ್ಲಿ ಮಿಡಿದ ಉತ್ಕೃಷ್ಟ ಸಂಸ್ಕೃತಿಯ ಸ್ವರಗತಿಯೊಂದಿಗೆ ನಾವು ಸಂಬಂಧವನ್ನು ಕಳೆದುಕೊಂಡಿದ್ದೇವೆ. ಆ ಸಂಬಂಧವನ್ನು ಮತ್ತೆ ಸ್ಥಾಪಿಸಿಕೊಳ್ಳಬೇಕಾಗಿದೆ." ಅವರು ನಮಗೆ ಜ್ಞಾಪಿಸುತ್ತಿದ್ದರು: "ನಾವು ಕಮ್ಯುನಿಸ್ಟರು ಬೇರಿಲ್ಲದವರಲ್ಲ. ಒಂದು ನಿರ್ದಿಷ್ಟ ಸಾಮಾಜಿಕ ಪ್ರಕ್ರಿಯೆಯ ಉತ್ಪತ್ತಿಗಳು ನಾವು. ನಮ್ಮ ದೇಶದ ಸಾಂಸ್ಕೃತಿಕ ಬೆಳವಣಿಗೆ ಹಾಗೂ ಸಾಮಾಜಿಕ ಪ್ರಗತಿಗಾಮಿ ಚಳುವಳಿಗಳ ಮುಂದುವರಿಕೆಯಲ್ಲೇ ನಾವು ಹೊರಹೊಮ್ಮಿದ್ದೇವೆ. ಹಿಂದಿನ ಮಹಾನ್ ವ್ಯಕ್ತಿಗಳ ಚಿಂತನೆಗಳೊಂದಿಗೆ ದ್ವಂದ್ವವಿದ್ದರೂ, ಈ ಕಾಲದ ಕ್ರಾಂತಿಕಾರಿಗಳು ಅವರ ನೈಜ ಉತ್ತರಾಧಿಕಾರಿಗಳು. ಆ ಮಹಾನ್ ವ್ಯಕ್ತಿಗಳ ಸೂಕ್ತ ಮೌಲ್ಯಮಾಪನದ ಮೂಲಕವೇ, ಅವರ ಚಳುವಳಿಯ ಮುಂದುವರಿಕೆಯಲ್ಲೇ – ಆದರೆ ಅವರ ವಿಚಾರಗಳೊಂದಿಗೆ ವಿಚ್ಛೇದಗೊಂಡೇ – ನಮ್ಮ ಕಾಲದ ಕ್ರಾಂತಿಕಾರಿ ಚಳುವಳಿಯು ಉನ್ನತ ಕಾರ್ಮಿಕವರ್ಗ ಪ್ರಜ್ಞೆಯ ಆಧಾರದಲ್ಲಿ ಬೆಳೆಯುತ್ತದೆ."

ಸಮೂಹ ಚಳುವಳಿ, ರಾಜಕೀಯ ಚಳುವಳಿಗಳಿಂದ ಹಿಡಿದು ಕುಟುಂಬ ಜೀವನವೂ ಸೇರಿದಂತೆ ಸಮಾಜದ ಎಲ್ಲಾ ಕ್ಷೇತ್ರಗಳಿಂದ ನೈತಿಕತೆ ಹಾಗೂ ಮಾನವ ಮೌಲ್ಯಗಳ ಸೂಕ್ಷ್ಮ ಪರಿಜ್ಞಾನ ಕಣ್ಮರೆಯಾಗುತ್ತಿರುವುದನ್ನು ಕಂಡು ಅವರು ಅತ್ಯಂತ ಕಳವಳಗೊಂಡರು ಮತ್ತು ತೀವ್ರ ಆಘಾತವನ್ನು ಅನುಭವಿಸಿದರು. ಅವರು ಹೇಳುತ್ತಿದ್ದರು: "ಹಸಿವೆಯಿಂದ ಬಳಲುತ್ತಿರುವ ರಾಷ್ಟ್ರವೂ ಕೂಡ ಮಾನವ ಮೌಲ್ಯಗಳನ್ನು ಹೊಂದಿದ್ದರೆ ಅನ್ಯಾಯದ ವಿರುದ್ಧ ಸಿಡಿದೇಳಬಹುದು. ಆದರೆ ಅದು ಮಾನವ ಮೌಲ್ಯಗಳನ್ನು ಕಳೆದುಕೊಂಡರೆ ಸರ್ವಸ್ವವನ್ನೂ ಕಳೆದುಕೊಂಡಂತೆ." ಅವರು ನುಡಿದರು: "ಸಮೂಹ ಚಳುವಳಿಗಳ ವಿವಿಧ  ಮಗ್ಗುಲುಗಳೂ ಸಹ, ಯಾವುದೇ ನೈತಿಕ ಪರಿಜ್ಞಾನವಿಲ್ಲದಂತಾಗಿರುವ ನಗ್ನ ವಾಸ್ತವಿಕತೆಯನ್ನು ನಾನು ಗಾಢವಾದ ನೋವು ಸಂಕಟಗಳಿಂದ ಗಮನಿಸುತ್ತಿದ್ದೇನೆ.

...ಸಾಂಸ್ಕೃತಿಕ ಮಿಡಿತ ದಿಕ್ಕಾಪಾಲಾಗಿದೆ ಹಾಗೂ ನೈತಿಕತೆಯ ಅಳಿದುಳಿದ ಎಲ್ಲಾ ಅಂಶಗಳು ಹೆಚ್ಚು ಕಡಿಮೆ ನಾಶವಾಗಿವೆ." "ಹೋರಾಟದಲ್ಲಿ ವಿಚಾರಶೀಲತೆಯೊಂದೇ ಏಕೈಕ ಅಂಶವಲ್ಲ – ಅದು ವಿಚಾರ ಹಾಗೂ ಭಾವನೆಗಳ ಬೆಸೆಯುವಿಕೆಯನ್ನು ಬಯಸುತ್ತದೆ; ಕ್ರಾಂತಿ ಇದಕ್ಕೆ ಹೊರತಲ್ಲ. ವಿಚಾರಗಳು ಬೆಳೆಯುತ್ತಿದ್ದು, ಭಾವನಾಪ್ರಕಾರವು ವಿಚಾರದೊಂದಿಗೆ ಸರಿಸಮನಾಗಿ ಬೆಳೆಯದಿದ್ದರೆ, ಆಗ ಒಂದು ಕಂದರ ಉಂಟಾಗುತ್ತದೆ. ಆಗ ವಿಚಾರಗಳು ನಿಶ್ಚಿತವಾಗಿ ಗೊಂದಲಕ್ಕೀಡಾಗುತ್ತವೆ ಹಾಗೂ ಹೋರಾಟಗಳು ಖಂಡಿತವಾಗಿ ದಿಕ್ಕಾಪಾಲಾಗಿ ಕುರುಡುಗಲ್ಲಿಯನ್ನು ಸೇರುತ್ತವೆ." "ಕೇವಲ ಘೋಷಣೆಗಳನ್ನು ಕೂಗುವುದೇ ಇಂದು ಸಮೂಹ ಹೋರಾಟಗಳ ಮುಖ್ಯ ಗುಣಲಕ್ಷಣವಾಗಿಬಿಟ್ಟಿದೆ. ಅಂತೆಯೇ ಸಮಾಜದ ಮೂಲಭೂತ ಬದಲಾವಣೆ, ಕ್ರಾಂತಿಕಾರಿ ಪರಿವರ್ತನೆಯ ಬಯಕೆಯಿಂದ ಅಲೆಗಳ ಮೇಲೆ ಅಲೆಗಳಂತೆ ಚಳುವಳಿಗಳು ಉಕ್ಕಿ ಬರುತ್ತಿವೆ, ಸ್ಫೋಟಿಸುತ್ತಿವೆ. ಜನತೆ, ಯುವಕರು ಜೀವತ್ಯಾಗ ಮಾಡುತ್ತಿದ್ದಾರೆ. ಆದರೆ ಕ್ರಾಂತಿ, ಸಮಾಜದ ಆಮೂಲಾಗ್ರ ಪರಿವರ್ತನೆ ಇನ್ನೂ ದೂರದ ಮಾತಾಗಿಯೇ ಉಳಿದಿದೆ." ಅವರು ಆಗಾಗ್ಗೆ ಹೇಳುತ್ತಿದ್ದರು: "ಉನ್ನತ ನೀತಿ, ಸಂಸ್ಕೃತಿಗಳಿಂದ ಸಂಪೂರ್ಣವಾಗಿ ಹೊರತಾದ ಬಲಿದಾನವಾಗಲಿ, ಅಲ್ಲಲ್ಲಿ ನಡೆಯುವ ಹೋರಾಟಗಳಾಗಲೀ ಎಷ್ಟೇ ನಡೆದರೂ ಕ್ರಾಂತಿಕಾರಿ ಪರಿವರ್ತನೆಯು ಉಂಟಾಗುವುದಿಲ್ಲ. ಚಳುವಳಿಗಳನ್ನು ಉನ್ನತ ನೈತಿಕತೆಯೊಂದಿಗೆ ಹಾಗೂ ಸೂಕ್ತ ರಾಜಕೀಯ ಪಥದ ಆಧಾರದಲ್ಲಿ ನಡೆಸಿದಾಗ ಮಾತ್ರವೇ ರಾಷ್ಟ್ರವು ಎಲ್ಲಾ ರೀತಿಯ ಅನ್ಯಾಯಗಳ ವಿರುದ್ಧ ದೃಢನಿರ್ಧಾರದಿಂದ ಎದ್ದುನಿಲ್ಲಬಹುದು."

ಸಮೂಹ ಹೋರಾಟಗಳನ್ನು ಉನ್ನತ ಕಾರ್ಮಿಕವರ್ಗದ ನೈತಿಕತೆ ಹಾಗೂ ಸಂಸ್ಕೃತಿಗಳ ಆಧಾರದಲ್ಲಿ ಕಟ್ಟಬೇಕೆಂದು ಕಾಮ್ರೇಡ್ ಘೋಷ್‌ರವರು ನಮಗೆ ಮತ್ತೆಮತ್ತೆ ಜ್ಞಾಪಿಸುತ್ತಿದ್ದರು. ಅವರು ನುಡಿದರು : "ಒಂದು ಪಕ್ಷವು ಮಹಾನ್ ವಿಚಾರಧಾರೆಯ ಬಗ್ಗೆ ಮಾತನಾಡುತ್ತದೆ ಎಂಬುದು ಅಷ್ಟೊಂದು ಮುಖ್ಯವಲ್ಲ. ಅದು ಬೋಧಿಸುವ ಆದರ್ಶ ನಿಜವಾಗಿಯೂ ಉತ್ಕೃಷ್ಟವೋ ಎಂಬುದು ಅದರ ನಾಯಕರು, ಕಾರ್ಯಕರ್ತರು ಹಾಗೂ ಬೆಂಬಲಿಗರು ಒಂದು ಉನ್ನತ ಮಟ್ಟದ ನೈತಿಕತೆ ಹಾಗೂ ರಾಜಕೀಯ ನಡತೆಯನ್ನು ಪ್ರತಿಬಿಂಬಿಸುತ್ತಾರೋ ಇಲ್ಲವೋ ಎಂಬುವುದರಿಂದ ಸಾಬೀತಾಗುತ್ತದೆ." ನೈತಿಕತೆಯ ಪ್ರಶ್ನೆಯನ್ನು ಕೇವಲ ಬೂರ್ಜ್ವಾ ಪೂರ್ವಗ್ರಹವೆಂದು ಪರಿಗಣಿಸಿರುವ ನಮ್ಮ ದೇಶದ ನಾಮಕಾವಾಸ್ತೆ ಕಮ್ಯುನಿಸ್ಟ್‌ರ ತಪ್ಪು ಪರಿಕಲ್ಪನೆಯನ್ನು ತೀವ್ರವಾಗಿ ಖಂಡಿಸಿ ಅವರು ಹೇಳಿದರು: "ಕಮ್ಯುನಿಸ್ಟ್ ವಿಚಾರಧಾರೆಯಲ್ಲಿ ಉನ್ನತವಾದ ಮತ್ತು ಉತ್ಕೃಷ್ಟವಾದ ನೈತಿಕತೆ, ಸಂಸ್ಕೃತಿ ಮತ್ತು ಮೌಲ್ಯಗಳನ್ನು ಕಾಣದಿದ್ದ ಪಕ್ಷದಲ್ಲಿ ನಾನು

ಎಂದಿಗೂ ಕಮ್ಯುನಿಸ್ಟ್ ಆಗುತ್ತಿರಲಿಲ್ಲ." ಅವರು ನಮಗೆ ಕಲಿಸಿದರು, "ಯಾವುದೇ ಉತ್ಕೃಷ್ಟ ಆದರ್ಶ, ತತ್ವಶಾಸ್ತ್ರ ಅಥವಾ ಯೋಗ್ಯ ವಿಚಾರಧಾರೆಯ ತಿರುಳು ಹಾಗೂ ಜೀವಾಳವು ಅಡಗಿರುವುದೇ ಅದರ ಸಾಂಸ್ಕೃತಿಕ–ನೈತಿಕ ಹಾಗೂ ಸೌಂದರ್ಯಪ್ರಜ್ಞೆಯ ಮಟ್ಟದಲ್ಲಿ. ಮಾರ್ಕ್ಸ್‌ವಾದ ಒಂದು ಉದಾತ್ತ ಕ್ರಾಂತಿಕಾರಿ ಆದರ್ಶ. ಈ ಮಹೋನ್ನತ ಕ್ರಾಂತಿಕಾರಿ ಆದರ್ಶದ ತಿರುಳು, ಅದರ ಜೀವಾಳವೂ ಕೂಡ ಅದರ ಸಾಂಸ್ಕೃತಿಕ–ನೈತಿಕ ಮೌಲ್ಯಗಳಲ್ಲಿ ಅಡಗಿದೆ." "ಯಾರೇ ಆಗಲಿ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಸರಿಯಾಗಿ ಮೈಗೂಡಿಸಿಕೊಂಡಿದ್ದಾರೋ ಇಲ್ಲವೋ ಎಂಬುದಕ್ಕೆ ಅಗ್ನಿಪರೀಕ್ಷೆ ಎಂದರೆ ಅವರ ಜೀವನದಲ್ಲಿ ಉನ್ನತವಾದ ಸಾಂಸ್ಕೃತಿಕ–ನೈತಿಕ ಮಟ್ಟ ಪ್ರತಿಬಿಂಬಿತವಾಗುತ್ತಿದೆಯೋ ಇಲ್ಲವೋ ಎಂಬುದು." ಅವರು ಹೇಳುತ್ತಿದ್ದರು, ಕ್ರಾಂತಿಕಾರಿ ರಾಜಕೀಯವೆಂದರೆ ಉನ್ನತವಾದ ಹಾಗೂ ಉದಾತ್ತವಾದ ಮಾನವ ಮೌಲ್ಯ ಹಾಗೂ ಭಾವನೆಗಳ ಪೋಷಣೆಯೇ ಆಗಿದೆ. ಕಾರ್ಮಿಕವರ್ಗದ ಕ್ರಾಂತಿಕಾರಿ ಚಳುವಳಿಯಿಂದ ಮಾತ್ರವೇ ವೃದ್ಧಿಸಬಹುದಾದ ಉದಾತ್ತ ಮಾನವ ಗುಣಲಕ್ಷಣಗಳಾದಂತಹ ಔದಾರ್ಯತೆ, ಭಾವುಕತೆ, ವಾತ್ಸಲ್ಯ, ಅನುಕಂಪ, ವಿವೇಕ, ಇವುಗಳನ್ನು ಗಳಿಸಿಕೊಳ್ಳದೆ ಪ್ರೇಮದ ನೈಜ ಪ್ರತ್ಯಕ್ಷೀಕರಣವು ಈ ಯುಗದಲ್ಲಿ ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದರು.

ಅವರು ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿಯೇ ಮೊಟ್ಟಮೊದಲ ಬಾರಿಗೆ ನಮ್ಮ ಪಕ್ಷದಲ್ಲಿ ಕಮ್ಯೂನ್ ಜೀವನವನ್ನು ಆರಂಭಿಸಿದರು. ಈ ಮೂಲಕ ನಾಯಕರು ಹಾಗೂ ಸಾಮಾನ್ಯ ಕಾರ್ಯಕರ್ತರೊಂದಿಗೆ ಸಾಮೂಹಿಕ ಜೀವನವನ್ನು ನಡೆಸುತ್ತಾ ಅವರು ಕಮ್ಯುನಿಸ್ಟ್ ಚಾರಿತ್ರ್ಯವನ್ನು ಗಳಿಸಿಕೊಳ್ಳುವ ಹೋರಾಟದ ಪರಿಕಲ್ಪನೆಯನ್ನು ಒಂದು ವಿನೂತನವಾದ ಮತ್ತಷ್ಟು ವೃದ್ಧಿಸಿದ ಔನ್ನತ್ಯಕ್ಕೆ ಏರಿಸಿದರು. ತಮ್ಮ ಕೊನೆಯುಸಿರಿರುವವರೆಗೂ ಅವರು ಪಕ್ಷದ ರಚನೆಯ ಆರಂಭದಲ್ಲಿ ಸ್ಥಾಪಿಸಿದ ಕಮ್ಯೂನ್‌ನಲ್ಲೇ ವಾಸ ಮಾಡಿದರು ಹಾಗೂ ಪ್ರತಿಯೊಂದು ವಿಷಯದಲ್ಲೂ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು, ಉನ್ನತ ರಾಜಕೀಯ ಪ್ರಜ್ಞೆಯನ್ನೂ ಸಾಂಸ್ಕೃತಿಕ–ನೈತಿಕ ಮಟ್ಟವನ್ನೂ ಗಳಿಸಿಕೊಳ್ಳುವಂತೆ ಮಾರ್ಗದರ್ಶನವಿತ್ತರು. ಅವರ ಜೊತೆಯಲ್ಲಿ ಕಮ್ಯೂನ್‌ನಲ್ಲಿ ವಾಸಮಾಡಿದ ಕಾಮ್ರೇಡರ ಪ್ರತಿಯೊಂದು ಸೂಕ್ಷ್ಮ ಅಂಶದತ್ತ ಸಹ ಅವರು ನೀಡಿದ ಗಮನ, ಕಾಮ್ರೇಡರ ಲೋಪದೋಷಗಳನ್ನು ಹಾಗೂ ಅಸಮರ್ಪಕತೆಗಳನ್ನು ಕೊನೆಯಿಲ್ಲದ ಸಹನೆಯಿಂದ ನಿರ್ಮೂಲನಗೊಳಿಸುವಲ್ಲಿ ಅವರು ತೋರಿದ ನಿರಂತರ ಕಾಳಜಿ; ಪ್ರತಿಯೊಂದು ವಿಷಯದ ಬಗ್ಗೆ ಅವರು ಹೊಂದಿದ್ದ ನಿರ್ವೈಯಕ್ತಿಕವಾದ ಧೋರಣೆ ಹಾಗೂ ದೃಷ್ಟಿಕೋನ – ಇವೆಲ್ಲವೂ ಪಕ್ಷದ ಕಾಮ್ರೇಡರಲ್ಲಿ

ಒಂದು ಉನ್ನತ ಮಟ್ಟದ ಕ್ರಾಂತಿಕಾರಿ ಸಾಂಸ್ಕೃತಿಕ–ನೈತಿಕ ಶೃತಿಯನ್ನು ಮಿಡಿಸಿವೆ. ಕಾರ್ಮಿಕವರ್ಗದ ನೀತಿ ಹಾಗೂ ಸಂಸ್ಕೃತಿಗಳ ಆಧಾರದಲ್ಲಿ ಎಲ್ಲಾ ಕಾರ್ಯಕರ್ತರನ್ನು ಉಕ್ಕಿನಂತೆ ಹದಗೊಂಡ ಕ್ರಾಂತಿಕಾರಿಗಳನ್ನಾಗಿ ಬೆಳೆಸಲು ಅವರು ಪಕ್ಷದೊಳಗೆ ನಿರಂತರವಾದ ಅವಿರತವಾದ ಹೋರಾಟವನ್ನು ನಡೆಸಿದರು. ಓರ್ವ ಮಹಾನ್ ಸಂಗೀತಕಾರ ಅತ್ಯಂತ ಶ್ರದ್ಧಾಭಾವದಿಂದ ತನ್ನ ವಾದ್ಯದ ತಂತಿಗಳನ್ನು ಏಕಶ್ರುತಿಯಲ್ಲಿ ಮೀಟುವಂತೆ ನಮ್ಮ ನೆಚ್ಚಿನ ಬೋಧಕರು ಮತ್ತಷ್ಟು ಹೆಚ್ಚಿನ ಶ್ರದ್ಧೆಯಿಂದ, ಇಡೀ ಪಕ್ಷದೊಳಗಿನ ಸಾಂಸ್ಕೃತಿಕ–ನೈತಿಕ ಸ್ವರಗತಿಯನ್ನು ಉನ್ನತವಾದ ಶ್ರುತಿಯಲ್ಲಿ ಮಿಡಿಸಿದರು. ಜನತೆ ಆಗಾಗ್ಗೆ ಆಶ್ಚರ್ಯ ವ್ಯಕ್ತಪಡಿಸುವಂಥ ಎಸ್‌ಯುಸಿಐ ಕಾರ್ಯಕರ್ತರ ದೈನಂದಿನ ಚಟುವಟಿಕೆ–ನಡವಳಿಕೆಗಳಲ್ಲಿ ಪ್ರತಿಬಿಂಬಿತವಾಗುತ್ತಿರುವ ಉನ್ನತ ನೈತಿಕ–ಸಾಂಸ್ಕೃತಿಕ ಮಟ್ಟ ಹಾಗೂ ಶಿಸ್ತು–ಪರಿಜ್ಞಾನಗಳ ಹಿಂದಿನ ರಹಸ್ಯ ಅಡಗಿರುವುದೇ ಇಲ್ಲಿ.

ಅವರು ಕಾರ್ಯಕರ್ತರಿಗೆ ಹೇಳುತ್ತಿದ್ದರು: “ಅಸಾಧ್ಯ ಎಂಬ ಪದಕ್ಕೆ ಒಬ್ಬ ಕಮ್ಯುನಿಸ್ಟನ ಶಬ್ದಕೋಶದಲ್ಲಿ ಸ್ಥಳವಿರಬಾರದು.” ತಮ್ಮ ಈ ಪ್ರತಿಪಾದನೆಯನ್ನು ರುಜುವಾತು ಪಡಿಸಲು ಒಮ್ಮೆ ಜೈಲಿನಲ್ಲಿರುವಾಗ ಅವರು ಸವಾಲೊಂದನ್ನು ಸ್ವೀಕರಿಸಿ ಗುರುವಿಲ್ಲದೆ ತಾವೇ ಸಿತಾರನ್ನು ಕಲಿಯಲು ಆರಂಭಿಸಿದರು. ಕೆಲವೇ ದಿನಗಳ ನಂತರ ಜೈಲಿನೊಳಗಿನ ಒಂದು ಸಮಾರಂಭದಲ್ಲಿ ಯಾವುದೇ ಅಪಶೃತಿ ಇಲ್ಲದೆ ಸಿತಾರನ್ನು ಮಿಡಿಸಿ ಎಲ್ಲರನ್ನೂ ಆಶ್ಚರ್ಯಗೊಳಿಸಿದರು. ಆನಂತರ ಅವರು ಮತ್ತೆಂದೂ ಸಿತಾರನ್ನು ಮುಟ್ಟಲಿಲ್ಲ.

ಅವರು ಪ್ರತಿಯೊಂದು ಕಾರ್ಯವನ್ನೂ ಅತ್ಯಂತ ಲಕ್ಷ್ಯಕೊಟ್ಟು, ಏಕಾಗ್ರತೆಯಿಂದ ಹಾಗೂ ದೋಷರಹಿತ ಪರಿಪೂರ್ಣತೆಯಿಂದ ನಿರ್ವಹಿಸುತ್ತಿದ್ದರು. ಅವರು ಹೇಳುತ್ತಿದ್ದರು: “ಸಣ್ಣ ಕೆಲಸವನ್ನು ಮಾಡುವಾಗಲೂ ಸಹ ಅದನ್ನು ಸೃಜನಾತ್ಮಕ ಮನಸ್ಸಿನಿಂದ ಮಾಡಿ.” ಮುಂದುವರೆದು ಅವರು ಹೇಳುತ್ತಿದ್ದರು, “ಒಬ್ಬ ಕ್ರಾಂತಿಕಾರಿಗೆ ಯಾವ ಕಾರ್ಯವೂ ಗೌಣವಲ್ಲ. ಯಾವುದಾದರೊಂದು ಕಾರ್ಯವು ಗೌಣವೆಂದೆಣಿಸಿ, ನೀವು ಗಂಭೀರಭಾವದಿಂದ ನಿರ್ವಹಿಸದಿದ್ದರೆ ಅದು ಕಾರ್ಯವನ್ನು ಕೆಡಿಸುವುದಷ್ಟೇ ಅಲ್ಲ, ಆಲೋಚನಾ ವಿಧಾನಕ್ರಮದಲ್ಲಿ ಸಮಗ್ರತೆಯನ್ನು ಬೆಳೆಸುವ ಪ್ರಕ್ರಿಯೆಗೇ ಅಡಚಣೆಯನ್ನುಂಟು ಮಾಡುತ್ತದೆ.”

ಸತ್ಯ ಶೋಧನೆಗಾಗಿ ಅವಿರತ ಹೋರಾಟ ನಡೆಸುವಂಥ ಹಾಗೂ ಕ್ರಾಂತಿಕಾರಿ ಜೀವನವನ್ನು ಉನ್ನತಮಟ್ಟದಿಂದ ಮತ್ತೂ ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಜೀವನ ಅವರದಾಗಿತ್ತು. ಜನತೆಯನ್ನು ಸಂಘಟಿಸುವುದರಲ್ಲಿನ ಅನುಭವಗಳ ಮೂಲಕ ಅವರು ಕ್ರಮೇಣ ಗಳಿಸಿದ ವಿಶಾಲ ಜ್ಞಾನಸಂಪತ್ತು ಒಂದು ಬತ್ತಿಹೋಗದ ಕಾರಂಜಿಯಾಗಿತ್ತು. ಅವರು ಹೇಳುತ್ತಿದ್ದರು: ಕಮ್ಯುನಿಸ್ಟರ ಹೋರಾಟವೆಂದರೆ ಸತ್ಯಶೋಧನೆಯ ಹೋರಾಟ.

ಮತ್ತೆ ಹೇಳುತ್ತಿದ್ದರು: ಪ್ರಸಕ್ತ ಯುಗದಲ್ಲಿ ಕಾರ್ಮಿಕವರ್ಗವು ಸತ್ಯವನ್ನು ಸೂಕ್ಷ್ಮವಾಗಿಯೂ, ವಿಮರ್ಶಾತ್ಮಕವಾಗಿಯೂ ಅರಿಯುವುದು ಅತ್ಯಾವಶ್ಯಕ. ಜೊತೆಗೆ ನುಡಿದರು: ನೀವು ಸತ್ಯವನ್ನು ಅರಿಯಬೇಕಾದರೆ, ಕಾರ್ಮಿಕವರ್ಗದ ಹೋರಾಟದಲ್ಲಿ ನಿರತರಾಗಿದ್ದು ಸತತವಾಗಿ ಇಂದು ನಿಮ್ಮ ವಿಚಾರಶೀಲತೆಯಿಂದ ಅರಿತ ಸತ್ಯವನ್ನು ನಿಮ್ಮ ಜೀವನದ ಎಲ್ಲಾ ರಂಗಗಳಲ್ಲೂ ಧೈರ್ಯದಿಂದ ಬಳಸಲು ದೃಢವಾದ, ನಿಶ್ಚಿತವಾದ ಹಾಗೂ ಸಂಧಾನಾತೀತ ಹೋರಾಟವನ್ನು ನಡೆಸಬೇಕು. ಹಾಗೆ ಈ ಹೋರಾಟಗಳಿಂದ ಲಭಿಸಿದಂಥ ಸತ್ಯದ ಆಳವಾದ, ಸೂಕ್ಷ್ಮವಾದ ಸಾಕ್ಷಾತ್ಕಾರದ ಆಧಾರದಲ್ಲಿ ನೀವು ನಿಮ್ಮನ್ನೇ ನಿರಂತರವಾಗಿ ಎಡೆಬಿಡದೆ ಬದಲಾಯಿಸಿಕೊಳ್ಳಬೇಕು – ಸತ್ಯವನ್ನು ಅರಿಯಲು ಇದೊಂದೇ ಮಾರ್ಗ. ಅವರು ನಮಗೆ ಹೇಳಿದರು: ನೀವು ನಿಜವಾಗಿಯೂ ಸತ್ಯದ ಆರಾಧಕರಾಗಿದ್ದಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಯಿಂದಲೂ ಕಲಿತುಕೊಳ್ಳಲು ನಿಮ್ಮ ಮನಸ್ಸನ್ನೂ, ದೃಷ್ಟಿಯನ್ನೂ ತೆರೆದಿಡಬೇಕು.

ಶ್ರಮಜೀವಿಗಳ ಹೋರಾಟ ಹಾಗೂ ಸಮಸ್ಯೆಗಳಿಂದ ಬೇರ್ಪಟ್ಟು ಕೇವಲ ವ್ಯಾಸಂಗದ ದೃಷ್ಟಿಯಿಂದ ಓದುವ ಅಭ್ಯಾಸಕ್ರಮ ಅವರದಾಗಿರಲಿಲ್ಲ. ಆದ್ದರಿಂದಲೇ ತಮ್ಮ ಮಹಾನ್ ಕ್ರಾಂತಿಕಾರಿ ಜೀವನ ಪರ್ಯಂತ ಅವರು ಜನತೆಯ ನಿರ್ದಿಷ್ಟ ಸಮಸ್ಯೆ, ಹೋರಾಟಗಳಿಂದ ದೂರವಾಗಿ ಅಭ್ಯಸಿಸಲು ತೊಡಗಿದ್ದು ಅತಿ ವಿರಳ. ಆದರೂ ಸಹ ವಿಜ್ಞಾನ, ತತ್ವಶಾಸ್ತ್ರ, ಸಾಹಿತ್ಯ, ಮನೋವಿಜ್ಞಾನ, ಸಂಗೀತ ಇತ್ಯಾದಿಗಳನ್ನೊಳಗೊಂಡ ಸಮಗ್ರ ಜ್ಞಾನದ ಎಲ್ಲಾ ವಿಭಾಗಗಳಲ್ಲಿ ಅವರಿಗಿದ್ದ ಪ್ರಖರವಾದ ಜ್ಞಾನ ಹಾಗೂ ವಿದ್ವತ್ತು ಎಲ್ಲರಲ್ಲೂ ವಿಸ್ಮಯವನ್ನೂ ಮೆಚ್ಚುಗೆಯನ್ನು ಉಂಟುಮಾಡುತ್ತಿತ್ತು. ಜ್ಞಾನವನ್ನು ಗಳಿಸುವ ಅವರ ವಿಧಾನ ಮೂಲಭೂತವಾಗಿ ಬೇರೆಯದಾಗಿತ್ತು. ಜನತೆಯ ವಿಮುಕ್ತಿ ಹೋರಾಟಗಳನ್ನು ಸಂಘಟಿಸುವ ಪ್ರಕ್ರಿಯೆಯಲ್ಲಿ ಎದುರಾದ ಸಮಸ್ಯೆಗಳನ್ನು ಹೋರಾಟಗಳ ಮೂಲಕ ಗಳಿಸಿಕೊಂಡ ಅನುಭವದಿಂದ ಬಗೆಹರಿಸಲು ಅವರು ಪ್ರಯತ್ನಿಸುತ್ತಿದ್ದರು. ಅದೇ ಸಮಯದಲ್ಲಿ ಆ ಸಮಸ್ಯೆಗಳನ್ನು ಮತ್ತಷ್ಟು ಹತ್ತಿರದಿಂದ ಸೂಕ್ಷ್ಮವಾಗಿ ಪರಿಶೀಲಿಸಲು ಅದಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳ ಬಗ್ಗೆ ಇತರರ ಜೊತೆ ಚರ್ಚಿಸುವುದಲ್ಲದೆ ಮಾರ್ಕ್ಸ್‌ವಾದದ ಅಭಿಜಾತ ಕೃತಿಗಳ ಸಹಾಯವನ್ನು ಸಹ ಪಡೆಯುತ್ತಿದ್ದರು. ಇದರಿಂದ ಯಾವ ಸತ್ಯ ಅವರಿಗೆ ಗೋಚರಿಸಿತೋ ಅದನ್ನವರು ಅವಿರತವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು. ಈ ರೀತಿ ಅವರಲ್ಲಿ ಸತ್ಯದ ಸಾಕ್ಷಾತ್ಕಾರವು ಹೆಚ್ಚು ಹೆಚ್ಚು ಉನ್ನತ ಹಂತಕ್ಕೆ ಏರಿತು. ಆದ್ದರಿಂದಲೇ ಅವರಿಗೆ ಅಷ್ಟೊಂದು ಪಾರದರ್ಶಕವಾದ ಸ್ಪಷ್ಟತೆಯಿಂದ ಸತ್ಯವನ್ನು ಗ್ರಹಿಸಿಕೊಳ್ಳಲಾಗುತ್ತಿತ್ತು ಮತ್ತು ಅದೇ

ರೀತಿ ಅದನ್ನು ಸರಳ ಶೈಲಿಯಲ್ಲಿ ಅಭಿವ್ಯಕ್ತಪಡಿಸಲು ಸಾಧ್ಯವಾಗುತ್ತಿತ್ತು. ಪಕ್ಷದ ಕಾರ್ಯಕರ್ತರ ಕ್ರಾಂತಿಕಾರಿ ಚಾರಿತ್ರ್ಯವನ್ನು ಮತ್ತು ತಿಳುವಳಿಕೆಯ ಮಟ್ಟವನ್ನು ಮೇಲೇರಿಸಲು ಅವರು ಮಾರ್ಕ್ಸ್‌ವಾದ–ಲೆನಿನ್‌ವಾದದ ಕುರಿತು ನಡೆಸುತ್ತಿದ್ದ ರಾಜನೈತಿಕ ತರಗತಿಗಳಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಪಡೆದವರು ಈ ವಿಷಯವನ್ನು ಗಮನಿಸಿರುತ್ತಾರೆ– ಅವರು ಅದೆಷ್ಟು ನಿರಾಯಾಸವಾಗಿ ಮಾರ್ಕ್ಸ್‌ವಾದಿ ತತ್ವಶಾಸ್ತ್ರದ ಅತ್ಯಂತ ಕ್ಲಿಷ್ಟವಾದ ಸಂಕೀರ್ಣವಾದ ವಿಷಯಗಳನ್ನು ಬುದ್ಧಿಜೀವಿಗಳು ಮಾತ್ರವಲ್ಲದೆ ಅನಕ್ಷರಸ್ಥ ರೈತ–ಕಾರ್ಮಿಕರೂ ಸಹ ಗ್ರಹಿಸುವಂತೆ ಸರಳ ರೀತಿಯಲ್ಲಿ ಪ್ರಸ್ತಾಪಿಸುತ್ತಿದ್ದರು!

ಅವರ ಜೀವನದಲ್ಲಿ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೂ ಹಾಗೂ ಅದನ್ನು ಆಚರಿಸುವುದಕ್ಕೂ ನಡುವೆ ಯಾವ ಅಂತರವೂ ಇರಲಿಲ್ಲ. ಸತ್ಯದ ಸಾಕ್ಷಾತ್ಕಾರದಿಂದ ಪ್ರೇರಣೆಹೊಂದಿ ಏನನ್ನಾದರೂ ಮಾಡಹೊರಟಾಗ ಬೆಟ್ಟದಷ್ಟು ಕಷ್ಟ ಹಾಗೂ ಪ್ರತಿಕೂಲ ಪರಿಸ್ಥಿತಿಗಳು ಬಂದರೂ ಅವರು ಎದೆಗುಂದುತ್ತಿರಲಿಲ್ಲ. ಕೇವಲ ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲೇ, ಎಲ್ಲಾ ರೀತಿಯ ಶೋಷಣೆಗಳಿಂದ ಜನತೆಯ ವಿಮುಕ್ತಿಯು, ಕಾರ್ಮಿಕವರ್ಗದ ನೈಜ ಕ್ರಾಂತಿಕಾರಿ ಪಕ್ಷವಿಲ್ಲದೆ ಅಸಾಧ್ಯ ಎಂಬ ಅರಿವು ಮೂಡಿದ ಕೂಡಲೇ ಅವರು ನಮ್ಮ ನೆಲದಲ್ಲಿ ಕಾರ್ಮಿಕವರ್ಗದ ಒಂದು ನೈಜ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ಕೆಲಸದಲ್ಲಿ ಪೂರ್ಣಮನಸ್ಸಿನಿಂದ ನಿರತರಾದರು. ಅದು ಸಾಧ್ಯವೋ ಇಲ್ಲವೋ ಎಂಬುದನ್ನು ಅವರು ಎಂದೂ ಕ್ಷಣಮಾತ್ರವೂ ಚಿಂತಿಸಲಿಲ್ಲ. ಯಾವುದೇ ಪ್ರತಿಕೂಲ ಪರಿಸ್ಥಿತಿ, ಯಾವುದೇ ಅಡಚಣೆ, ಎಷ್ಟೇ ಕಷ್ಟಗಳು ಬಂದರು ಈ ಪ್ರತ್ಯಕ್ಷೀಕರಣವನ್ನು ಆಚರಣೆಗೆ ತರುವ ಹಾದಿಯಿಂದ ಅವರು ವಿಚಲಿತರಾಗಲಿಲ್ಲ. ಈ ಪಕ್ಷವನ್ನು ಕಟ್ಟಲು ಯೋಚನೆಗೂ ನಿಲುಕದಂತಹ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಲು ಅವರನ್ನು ಇಪ್ಪತ್ತನೆಯ ವರ್ಷದಲ್ಲೇ ಶಕ್ತವಾಗಿಸಿದ ಅವರ ಕ್ರಾಂತಿಕಾರಿ ಚಾರಿತ್ರ್ಯದ ದೃಢ ಬುನಾದಿ ಹಾಗೂ ಧ್ಯೇಯವನ್ನು ಸಾಧಿಸುವುದರಲ್ಲಿ ಅವರಿಗಿದ್ದ ಛಲ ಅಥವಾ ಕ್ರಾಂತಿಕಾರಿ ಕೆಚ್ಚು ಎಷ್ಟೊಂದು ಅದ್ಭುತವಾಗಿತ್ತು.

ತಮ್ಮ ಸಣ್ಣ ವಯಸ್ಸಿನಿಂದಲೇ ಸತ್ಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಅಚಲವಾದ ನಿರ್ಧಾರ ಹಾಗೂ ಶ್ರದ್ಧಾಮನೋಭಾವವನ್ನು ಅವರು ಬೆಳೆಸಿಕೊಂಡರು. ತಮ್ಮ ಹದಿಮೂರನೇ ವಯಸ್ಸಿನಲ್ಲೇ ಸಾಮಾಜಿಕ ಪ್ರಗತಿಯ ಪ್ರಶ್ನೆಯು ಬ್ರಿಟಿಷ್ ಸಾಮ್ರಾಜ್ಯಶಾಹಿ ಆಳ್ವಿಕೆಯ ಹಿಡಿತದಿಂದ ಭಾರತವು ಬಿಡುಗಡೆ ಹೊಂದುವ ಪ್ರಶ್ನೆಯೊಂದಿಗೆ ಅಭೇದ್ಯವಾಗಿ ಸಂಬಂಧಿಸಿದೆ ಎಂಬ ಅರಿವು ಮೂಡಿದಾಕ್ಷಣವೇ ತಮ್ಮ ಮುಂದಿನ ಜೀವನಗತಿಯನ್ನು ನಿರ್ಧರಿಸಲು ಅವರು ಕ್ಷಣಮಾತ್ರವೂ ಹಿಂಜರಿಯಲಿಲ್ಲ. "ಅನುಶೀಲನ್

ಸಮಿತಿ"ಯ ಕರೆಗೆ ಓಗೊಟ್ಟು ಅವರು ತಮ್ಮ ವೈಯಕ್ತಿಕ ಸಂಸಾರ, ಮನೆ, ಶಿಕ್ಷಣ, ಜೀವನೋಪಾಯ – ಎಲ್ಲವನ್ನೂ ತೊರೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ತಮ್ಮ ತಂದೆ– ತಾಯಂದಿರ ಕಣ್ಣೀರಿನಲ್ಲಿ ಅವರು ಕಂಡಿದ್ದು ಸಮಾಜದ ಮಿಲಿಯಾಂತರ ಮರ್ದಿತ ಅವಮಾನಿತ ತಂದೆ–ತಾಯಂದಿರ ದುಃಖ ಹಾಗೂ ಶೋಕವನ್ನು. ಈ ನೋವು ಅಥವಾ ವೇದನೆ ಜೀವನದಲ್ಲಿ ತನ್ನಿಂದ ಏನನ್ನು ಬಯಸುತ್ತದೆ ಎಂಬುದನ್ನು ಅರಿಯಲು ಅವರು ಕ್ಷಣಮಾತ್ರವೂ ವಿಫಲಗೊಳ್ಳಲಿಲ್ಲ. ಅವರು ಆಗಿನ ಪೂರ್ವ ಬಂಗಾಲದ ಒಂದು ಕೆಳ ಮಧ್ಯಮವರ್ಗ ಕುಟುಂಬದ ಜೇಷ್ಠ ಪುತ್ರರಾಗಿದ್ದರು ಮತ್ತು ಓರ್ವ ಉಜ್ವಲ ವಿದ್ಯಾರ್ಥಿಯಾಗಿದ್ದರು. ಅವರ ತಂದೆ–ತಾಯಂದಿರು ಅವರ ಕುರಿತು ಎಷ್ಟೊಂದು ಆಸೆ ಅಪೇಕ್ಷೆಗಳನ್ನು ಹೊತ್ತುಕೊಂಡಿದ್ದರು! ತಮ್ಮ ತಂದೆ–ತಾಯಂದಿರಲ್ಲಿ ಅವರಿಗೆ ಎಷ್ಟೊಂದು ಅಸೀಮ ಪ್ರೇಮಾದರಗಳಿದ್ದವು! ಸಾಮಾನ್ಯವಾಗಿ ಅವರೆಂದೂ ತಮ್ಮ ಚಿಕ್ಕಂದಿನ ಕುಟುಂಬ ಜೀವನದ ಕುರಿತು ಮಾತನಾಡುತ್ತಿರಲಿಲ್ಲ. ಆದರೆ ಯಾವುದೇ ಸಂದರ್ಭದಲ್ಲಿ ತಮ್ಮ ತಂದೆಯ ಬಗ್ಗೆ ಪ್ರಸ್ತಾಪ ಬಂದಾಗ ಅವರ ಕಂಠ ಭಾವೋದ್ವೇಗದಿಂದ ಗದ್ಗದಿತವಾಗುತ್ತಿತ್ತು.ತಮ್ಮ ತಂದೆ ತಾಯಂದಿರ ಬಗ್ಗೆ ಅವರಿಗಿದ್ದ ಈ ಗಾಢ ಪ್ರೇಮ ಭಾವೋದ್ವೇಗಗಳೇ ಜನತೆಯ ಕುರಿತಾದಂಥ ಗಾಢವಾದ ನೈಜ ಪ್ರೇಮವಾಗಿ ರೂಪುಗೊಂಡವು.

ಸತ್ಯವನ್ನು ಜೀವನದಲ್ಲಿ ಅಳವಡಿಸುವ ಈ ದೃಢವಾದ ಹಾಗೂ ಅಚಲವಾದ ಹೋರಾಟವೇ ಅವರನ್ನು ಅಂತಹ ಮಹಾನ್ ವ್ಯಕ್ತಿಯನ್ನಾಗಿ ರೂಪಿಸಿತು. ಅವರು ಸ್ವತಃ ತತ್ವ ಧ್ಯೇಯಗಳ ಕುರಿತು ದೃಢವಾಗಿಯೂ ಅಚಲರಾಗಿಯೂ ಇದ್ದರು ಮತ್ತು ಇದನ್ನೇ ಇತರರಿಂದಲೂ ಅಪೇಕ್ಷಿಸಿದರು. ಆದರೆ ಯಾವುದೇ ರೀತಿಯ ಅಂಧಾನುಕರಣೆಯನ್ನು ಅವರು ತೀವ್ರವಾಗಿ ವಿರೋಧಿಸುತ್ತಿದ್ದರು. ಏನನ್ನಾದರೂ ಸತ್ಯವೆಂದು ಒಪ್ಪುವ ಮೊದಲು ಅವರು ಯಾವಾಗಲೂ ಅದನ್ನು ಹೋರಾಟದಿಂದ ಲಭಿಸಿದ ವೈಜ್ಞಾನಿಕ ತರ್ಕ, ಅನುಭವಗಳನ್ನು ಆಧರಿಸಿದ ಸೂಕ್ಷ್ಮ ಪರಿಶೀಲನೆಗೆ ಒಳಪಡಿಸುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಸಾಮಾನ್ಯ ಕಾರ್ಯಕರ್ತರ ಕಲ್ಪನೆಗೂ ಮೀರಿದ ರೀತಿಯಲ್ಲಿ ಅವರು ನಾಯಕರುಗಳೊಂದಿಗೆ ಚರ್ಚೆ ಮತ್ತು ಸಂವಾದಗಳಲ್ಲಿ ತೊಡಗಲು ಹಿಂಜರಿಯಲಿಲ್ಲ; ಆದರೆ ಇದನ್ನು ನಡೆಸುವಾಗ ನಾಯಕರಿಗೆ ಸಲ್ಲತಕ್ಕ ಗೌರವಾದರಗಳನ್ನು ನೀಡಲು ಮರೆಯುತ್ತಿರಲಿಲ್ಲ. ಹಾಗೆಯೇ ಈ ಚರ್ಚೆ,

ವಾದವಿವಾದಗಳಿಂದ ಅವರು ಪರಿಕಲ್ಪಿಸಿಕೊಂಡ ಸತ್ಯವನ್ನು ಅಷ್ಟೇ ಅಚಲವಾದ ಉತ್ಸಾಹದಿಂದ ಸಮರ್ಥಿಸಿ ಜೀವನದಲ್ಲಿ ಅಳವಡಿಸಿಕೊಳ್ಳುತ್ತಿದ್ದರು.

ಆನಂತರ ಎಸ್‌ಯುಸಿಐ ನಲ್ಲೂ ಕೂಡ ನಾಯಕತ್ವದ ಅಂಧಾನುಕರಣೆಯ ಯಾವುದೇ ಧೋರಣೆಯನ್ನು ಹಿಮ್ಮೆಟ್ಟಿಸುವ ಸಲುವಾಗಿ ಎಡೆಬಿಡದೆ ಪ್ರಜ್ಞಾಪೂರ್ವಕ ಹೋರಾಟವನ್ನು ನಿರ್ವಹಿಸಿದರು. ಕಾಮ್ರೇಡರಿಗೆ ಅವರ ಸಲಹೆ ಹೀಗಿತ್ತು: ನಾಯಕರನ್ನು ಒಪ್ಪುವ ಮುನ್ನ ಅವರನ್ನು ಸೂಕ್ಷ್ಮವಾಗಿ ಪರಿಶೀಲಿಸಿ. ಅವರು ಎಚ್ಚರಿಕೆ ನೀಡುತ್ತಿದ್ದರು: ಪಕ್ಷದ ಜೀವನದಲ್ಲಿ ಚರ್ಚೆ, ವಾದ–ವಿವಾದ ಹಾಗೂ ಸೂಕ್ಷ್ಮ ಪರಿಶೀಲನೆಗಳ ವಾತಾವರಣದ ಬದಲು ಯಾಂತ್ರಿಕ ಅನುಕರಣೆಯ ಅಂಧ ಆಚರಣೆ ಬಂದುಬಿಟ್ಟರೆ ಅದು ಕಾರ್ಯಕರ್ತರ ಮಟ್ಟವನ್ನು ಕೆಳಕ್ಕಿಳಿಸುವುದಷ್ಟೇ ಅಲ್ಲದೆ, ಅತ್ಯಂತ ಆದರಣೀಯ ಭಾವನೆಯಿಂದ ಕಾಣಲಾಗುತ್ತಿದ್ದ ಅಗ್ರ ನಾಯಕನನ್ನೂ ಸಹ ಕ್ರಮೇಣವಾಗಿ ಕೀಳುಮಟ್ಟಕ್ಕಿಳಿಸುತ್ತದೆ. ಆದ್ದರಿಂದಲೇ ನಾಯಕರೂ ಕೂಡ ತಮ್ಮ ಮುನ್ನಡೆಯ ಸಲುವಾಗಿಯೇ ಸಕ್ರಿಯವಾದ ಹಾಗೂ ಪ್ರಜ್ಞಾಪೂರ್ವಕವಾದ ಹೋರಾಟದ ಮೂಲಕ ಪಕ್ಷದೊಳಗೆ ಇಂತಹ ಆರೋಗ್ಯಕರ ವಾತಾವರಣವನ್ನು ಅತ್ಯಂತ ಜಾಗರೂಕತೆಯಿಂದ ಜೀವಂತವಾಗಿರಿಸಬೇಕು. ಆದರೆ ಇದರ ಬಗ್ಗೆ ಅವರ ನಿರ್ದಿಷ್ಟ ಬೋಧನೆ ಹೀಗಿತ್ತು: ಇಂತಹ ವಾದವಿವಾದ ಚರ್ಚೆಗಳನ್ನು ಅಹಂಭಾವ, ಪೂರ್ವಗ್ರಹ ಅಥವಾ ಪೂರ್ವಕಲ್ಪನೆಗಳಿಂದ ಮುಕ್ತವಾಗಿಸಬೇಕು. ಅವರು ಮತ್ತೆ ಮತ್ತೆ ಪಕ್ಷದ ಕಾರ್ಯಕರ್ತರಿಗೆ ಹೀಗೆ ಎಚ್ಚರಿಕೆಯನ್ನಿತ್ತಿದ್ದಾರೆ: "ಈ ಅಹಂಭಾವವು ಪೂರ್ಣವಾಗಿ ಹೋರಾಡಲ್ಪಡದೆ ನಿಮ್ಮಲ್ಲಿ ಉಳಿದುಕೊಂಡರೆ ಅದು ಎಷ್ಟೇ ನಿಗೂಢ ಅಗೋಚರ ರೂಪದಲ್ಲಿರಲಿ, ಕಾಲಗತಿಯಲ್ಲಿ ಅದು ಸಮಯಸಾಧಕತೆ, ದುಸ್ಸಾಹಸ ಹಾಗೂ ಪರಿಷ್ಕರಣವಾದಗಳಿಗೆ ಎಡೆಮಾಡಿಕೊಡಬಹುದು." ಅವರು ಹೇಳುತ್ತಿದ್ದರು: "ಕಾಮ್ರೇಡರ ಮಾತಿನ ಶೈಲಿಗೆ ಅಷ್ಟೊಂದು ಮಹತ್ವವನ್ನು ನೀಡಬೇಡಿ, ಅವರ ಮಾತಿನಲ್ಲಿರುವ ಇಂಗಿತವನ್ನು ಗ್ರಹಿಸಲು ಪ್ರಯತ್ನಿಸಿ."

ಏನನ್ನಾದರೂ ತರ್ಕಶಾಸ್ತ್ರ ಹಾಗೂ ವಿಜ್ಞಾನಗಳ ಆಧಾರದಲ್ಲಿ ಒಪ್ಪುವ ಈ ಧೋರಣೆ, ದೃಷ್ಟಿಕೋನ ಹಾಗೂ ಮನೋಭಾವ, ಹಾಗೆಯೇ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವುದು – ಇವು ಅವರನ್ನು ಮಾರ್ಕ್ಸ್‌ವಾದಿ ತತ್ವಶಾಸ್ತ್ರ ಮತ್ತು ಅದರ ದ್ವಂದ್ವಾತ್ಮಕ ವಿಧಾನಕ್ರಮದತ್ತ ಆಕರ್ಷಿಸಿದವು. ಆದ್ದರಿಂದ 1940ರಲ್ಲಿ "ಅನುಶೀಲನ್ ಸಮಿತಿ"ಯಿಂದ ಒಂದು ಗುಂಪು ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷವನ್ನು

ರಚಿಸುವ ಧ್ಯೇಯದಿಂದ ಆರ್‌ಎಸ್‌ಪಿ* ಹೆಸರಿನಲ್ಲಿ ಹೊರಬಂದಾಗ ಅವರು ಅದರೊಂದಿಗೆ ಭಾಗಿಯಾದರು. ಆದರೆ ಸ್ವಲ್ಪ ಕಾಲದ ಬಳಿಕ ದ್ವಿತೀಯ ಮಹಾಯುದ್ಧ ಆರಂಭವಾದೊಡನೆ ಸಾಮ್ರಾಜ್ಯಶಾಹಿ ಆಳ್ವಿಕರು ಸ್ವಾತಂತ್ರ್ಯ ಹೋರಾಟಗಾರರನ್ನು ಜೈಲಿಗೆ ಹಾಕಲು ತೊಡಗಿದರು. ಹಲವರನ್ನು ಬಂಧಿಸಲಾಯಿತು; ಉಳಿದವರು ಭೂಗತ ಚಟುವಟಿಕೆಗಳಲ್ಲಿ ತೊಡಗಿದರು. ಕಾಮ್ರೇಡ್ ಘೋಷರಿಗೆ ಸಂಘಟನೆಯ ಜವಾಬ್ದಾರಿಯನ್ನು ವಹಿಸಿದ್ದರಿಂದ ಅವರು ತಮ್ಮ ಚಟುವಟಿಕೆಯ ಕೇಂದ್ರವನ್ನು ಢಾಕಾದಿಂದ ಕಲ್ಕತ್ತಾಗೆ ಸ್ಥಳಾಂತರಿಸಿದರು ಹಾಗೂ ಆಗಸ್ಟ್ ಚಳುವಳಿಯಲ್ಲಿ ಗಮನಾರ್ಹ ಪಾತ್ರವನ್ನು ನಿರ್ವಹಿಸಿದರು. 1942ರಲ್ಲಿ ಭೂಗತರಾಗಿದ್ದ ಕಾಲದಲ್ಲಿ ಅವರನ್ನೂ ಸಹ ಬಂಧಿಸಿ ಮೂರು ವರ್ಷಗಳ ಕಾಲ ಸೆರೆಮನೆಯಲ್ಲಿರಿಸಲಾಯಿತು. ಸೆರೆಮನೆಯಲ್ಲಿ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷವನ್ನು ರಚಿಸುವ ಸಲುವಾಗಿ ಸೂಕ್ತವಾದ ವೈಜ್ಞಾನಿಕ ಪ್ರಕ್ರಿಯೆಯ ಮೂಲಕ ಆರ್‌ಎಸ್‌ಪಿಯನ್ನು ಕಟ್ಟಲು ಅವರು ತೀಕ್ಷ್ಣವಾದ ಹೋರಾಟವನ್ನು ಆರಂಭಿಸಿದರು.

ಯಾವುದನ್ನೇ ಆಗಲೀ, ಇತರರು ಆಚರಿಸಬೇಕೆಂದು ಕೇಳುವ ಮುನ್ನ ಅವರು ಅದನ್ನು ಮೊದಲು ತಮ್ಮ ಜೀವನದಲ್ಲೇ ಅಳವಡಿಸಿಕೊಳ್ಳುತ್ತಿದ್ದರು – ಈ ಉನ್ನತವಾದ ನೈತಿಕ ರೂಢಿಯನ್ನು ಅವರು ತಮ್ಮ ಬಾಲ್ಯದ ದಿನಗಳಿಂದಲೇ ಬೆಳೆಸಿಕೊಂಡರು. ಅವರ ಇಡಿಯ ಜೀವನದ ನಡತೆ ಹಾಗೂ ವರ್ತನೆಗಳು ಇದನ್ನು ರುಜುವಾತುಪಡಿಸುತ್ತವೆ. ಹಸಿವು ಹಾಗೂ ಬಡತನದಲ್ಲಿ ಬಳಲುತ್ತಿರುವ ತಂದೆ ತಾಯಂದಿರ ಸಮಸ್ಯೆಗಳು, ಪತ್ನಿ–ಪುತ್ರರಿಗೆ ಸಂಬಂಧಿಸಿದ ಸಮಸ್ಯೆಗಳು – ಇವೆಲ್ಲವೂ ಅವರ ಜೀವನದಲ್ಲಿ ಕಾಣಿಸಿಕೊಂಡವು. ಆದರೆ ಕ್ರಾಂತಿಯ ಧ್ಯೇಯಕ್ಕಾಗಿ ಸಂಪೂರ್ಣ ನಿಷ್ಠೆ ಮತ್ತು ಶ್ರದ್ಧಾಭಾವಗಳಿಂದಾಗಿ ಅವರಲ್ಲಿ ಬೆಳೆದ ಆ ಸಾಕ್ಷಾತ್ಕಾರದ ಬೆಳಕಿನಲ್ಲೇ ಅವರು ಈ ಎಲ್ಲಾ ಸಮಸ್ಯೆಗಳನ್ನೂ ದೃಢ ನಿರ್ಧಾರ, ಸಾಹಸಗಳಿಂದ ಬಗೆಹರಿಸಿಕೊಂಡರು. ಆನಂತರ ಮತ್ತೊಂದು ಹಂತದಲ್ಲಿ, ತಮ್ಮ ಜೀವನ ಹಾಗೂ ಹೋರಾಟಗಳನ್ನು ಉನ್ನತವಾದ, ಮುಂದುವರೆದ ಕ್ರಾಂತಿಕಾರಿ ಪ್ರಜ್ಞೆಯನ್ನು ಆಧರಿಸಿ ನಿರ್ವಹಿಸುವ ಗತಿಯಲ್ಲಿ, ಸ್ವಂತ ಅನುಭವಗಳ ಮೂಲಕ ಪ್ರಾಪ್ತವಾದ ಸತ್ಯದ ಅಡಿಪಾಯದಲ್ಲಿ ಅವರು ಕ್ರಾಂತಿಕಾರಿಗಳಿಗೆ ನೀತಿ ಸಂಹಿತೆಯೊಂದನ್ನು ರೂಪಿಸಿದರು. ಈ ನೀತಿ ಸಂಹಿತೆ ಕಮ್ಯುನಿಸ್ಟ್ ಚಳುವಳಿಯಲ್ಲಿ ಮತ್ತಷ್ಟು ವಿಕಸನಗೊಂಡ ಹಾಗೂ ಸಂಪೂರ್ಣವಾಗಿ ಹೊಸದಾದ ದೃಷ್ಟಿಕೋನವೊಂದನ್ನು ನೀಡಿದೆ – ಈ ಕಾಲದಲ್ಲಿ ಬೂರ್ಜ್ವಾ ವ್ಯಕ್ತಿವಾದವು ಕೇವಲ ಸವಲತ್ತುಗಳ ಮಟ್ಟಕ್ಕೆ ಇಳಿದಿರುವಾಗ ಹಾಗೂ ತೀವ್ರ

* ಆರ್ ಎಸ್ ಪಿ – ರೆವಲ್ಯೂಶನರಿ ಸೋಷಲಿಸ್ಟ್ ಪಾರ್ಟಿ

ಪ್ರತಿಗಾಮಿ ಲಕ್ಷಣವನ್ನು ಪಡೆದುಕೊಂಡಿರುವಾಗ, ಇಂತಹ ನೀತಿ ಸಂಹಿತೆ ಇಲ್ಲದೆ ಯಾರೂ ಕಮ್ಯುನಿಸ್ಟ್ ಚಾರಿತ್ರ್ಯವನ್ನು ಗಳಿಸಲು ಸಾಧ್ಯವಿಲ್ಲ.

*ಸಿಪಿಐ ಪಕ್ಷದ ನಾಯಕರ ಖಾಸಗೀ ಜೀವನ ಮತ್ತು ವೈಯಕ್ತಿಕ ನಡತೆಗಳು ಕಮ್ಯುನಿಸ್ಟ್ ಮಟ್ಟದಿಂದ ಬಹು ದೂರವೇ ಉಳಿದಿವೆ ಎಂಬ ಸಂಗತಿ ಕಾಮ್ರೇಡ್ ಘೋಷ್‌ರವರಿಗೆ ಬಹಳ ಗಮನಾರ್ಹವಾಗಿ ಕಂಡಿತು. ಸಿಪಿಐ ಪಕ್ಷವು ಕಾರ್ಮಿಕವರ್ಗದ ಅಕೃತ್ರಿಮ ಪಕ್ಷವಾಗಿ ಬೆಳೆಯಲು ವಿಫಲಗೊಂಡಿದೆ ಎಂದು ನಿಸ್ಸಂದೇಹವಾಗಿ ತೀರ್ಮಾನಿಸಲು ಅವರಿಗೆ ಇದು ಪ್ರಧಾನ ಕಾರಣವಾಯಿತು. ಅವರು ಹೇಳುತ್ತಿದ್ದರು: "ಈ ನಾಯಕರು, ಕ್ರಾಂತಿಗಾಗಿ ತಮ್ಮನ್ನೇ ಅರ್ಪಿಸಿಕೊಳ್ಳುವಂತೆ ನಮ್ಮ ದೇಶದ ವಿದ್ಯಾರ್ಥಿ ಯುವಜನರಿಗೆ ಕರೆ ನೀಡುತ್ತಾರೆ. ಹೋರಾಟಮಾಡಬೇಕು, ಜೈಲಿಗೆಹೋಗಬೇಕು, ಲಾಠಿ–ಗುಂಡುಗಳನ್ನು ಎದುರಿಸಬೇಕು ಎಂದು ಅವರಿಗೆ ಹೇಳುತ್ತಾರೆ. ಭವಿಷ್ಯದ ಜೀವನೋಪಾಯದ ಬಗ್ಗೆ ಲಕ್ಷ್ಯ ಕೊಡಬೇಡಿ ಎನ್ನುತ್ತಾರೆ. ಆದರೆ ತಮ್ಮ ಮಕ್ಕಳಿಗೆ – ಒಳ್ಳೆಯ ವಿದ್ಯಾರ್ಥಿಗಳಾಗಿ, ಮೊದಲು ನಿಮ್ಮ ಜೀವನೋಪಾಯವನ್ನು ಹುಡುಕಿಕೊಳ್ಳಿ, ನಿಮ್ಮ ಜೀವನದ ಭದ್ರತೆ ಖಚಿತವಾದ ನಂತರ ಏನು ಮಾಡಬೇಕೆಂಬುದನ್ನು ನಿರ್ಧರಿಸಿ ಎನ್ನುತ್ತಾರೆ. ತಮ್ಮ ಮಗನಿಗಾಗಿ ಆಕರ್ಷಕ ಉದ್ಯೋಗವನ್ನೂ, ಮಗಳಿಗಾಗಿ ಯೋಗ್ಯ ಸ್ಥಿತಿಯಲ್ಲಿರುವ ವರನನ್ನೂ ಹುಡುಕುತ್ತಾರೆ. ಆದರೆ ದೇಶದ ಇತರ ಮಕ್ಕಳಿಗೆ ಅವರ ಉಪದೇಶ – ಕ್ರಾಂತಿಗಾಗಿ ಹೋರಾಡಿ. ಈ ನಾಯಕರ ಇಂತಹ ಲಜ್ಜಾಹೀನ ಬೂಟಾಟಿಕೆಯಿಂದಲೇ ಈ ಉದಾತ್ತ ವಿಚಾರಧಾರೆಯು ಆರ್ಥಿಕವಾದ – ಸುಧಾರಣಾವಾದದ ಸಂಕುಚಿತ ಮಿತಿಗಳೊಳಗೆ ಬಂಧಿಸಲ್ಪಟ್ಟಿದೆ ಹಾಗೂ ಜನತೆಯನ್ನು ಕ್ರಾಂತಿಗಾಗಿ ಹುರಿದುಂಬಿಸುವಲ್ಲಿ ಇಂದಿನವರೆಗೂ ವಿಫಲಗೊಂಡಿದೆ."

ಶ್ರೀ ಎಂ.ಎನ್.ರಾಯ್** ರವರ ಪಾಂಡಿತ್ಯದ ಕುರಿತು ಅವರು ಹೀಗೆನ್ನುತ್ತಿದ್ದರು: ಭಾರತದಲ್ಲಿ ಮಾರ್ಕ್ಸ್‌ವಾದಕ್ಕೆ ಸೈದ್ಧಾಂತಿಕ ಅಡಿಪಾಯವನ್ನು ಒದಗಿಸಲು ಯಾರಾದರೂ ಪ್ರಯತ್ನಿಸಿದ್ದುದೇ ಆದರೆ ಅದು ಪ್ರಪ್ರಥಮವಾಗಿ ಎಂ.ಎನ್.ರಾಯ್. ಅವರ ಪಾಂಡಿತ್ಯವನ್ನು ಕುರಿತು ಹೇಳಬೇಕೆಂದರೆ ಅವರಲ್ಲಿ ಅತ್ಯುತ್ತಮ ಸಾಧ್ಯತೆಯಿತ್ತು. ಆದರೆ ಎಂ.ಎನ್.ರಾಯ್‌ರವರ ಬಗ್ಗೆ ಅವರು ಯಾವುದೇ ಭ್ರಮೆಯನ್ನು ಇರಿಸಿಕೊಳ್ಳಲಿಲ್ಲ – ಕಾರಣ ಅವರ ಜೀವನದಲ್ಲಿ ಬೋಧನೆ ಮತ್ತು ಆಚರಣೆಗಳ ನಡುವೆ ಇದ್ದ ಕಣ್ಣು

* ಸಿಪಿಐ – ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ

** ಮಾನವೇಂದ್ರನಾಥ್ ರಾಯ್ – ಭಾರತದಲ್ಲಿ ಮಾರ್ಕ್ಸ್‌ವಾದವನ್ನು ಪರಿಚಯಿಸಿದ ಮೊದಲಿಗರಲ್ಲೊಬ್ಬರು, ಅಂತರರಾಷ್ಟ್ರೀಯ ಖ್ಯಾತಿಯಿದ್ದವರು.

ಕುಕ್ಕುವಂತಿದ್ದ ಸಾಮ್ಯತೆಯ ಕೊರತೆ ಕಾಮ್ರೇಡ್ ಶಿವದಾಸ್ ಘೋಷ್‌ರಿಗೆ ಮೊದಲಿನಿಂದಲೇ ಗೋಚರಿಸಿತು. ಎಂ.ಎನ್.ರಾಯ್‌ರವರ ದಿಕ್ಚ್ಯುತಿ ಹಾಗೂ ಅವನತಿಗಳ ಬಗ್ಗೆ ಅವರೇ ಸಮಗ್ರವಾದ ವಿಮರ್ಶಾತ್ಮಕ ಸೈದ್ಧಾಂತಿಕ ವಿಶ್ಲೇಷಣೆಯನ್ನು ನೀಡಿದರು. ಆನಂತರ ಎಂದಾದರೂ ಎಂ.ಎನ್.ರಾಯ್‌ರವರ ಪ್ರಸ್ತಾಪ ಬಂದರೆ ಅವರು ಹೇಳುತ್ತಿದ್ದರು: ಅವರು ಕಮ್ಯುನಿಸ್ಟರೆ? ಹಾಗಾದರೆ ಅವರು ತಮ್ಮ ಜೀವನವನ್ನು ಹೇಗೆ ನಡೆಸುತ್ತಾರೆ? ಅವರ ವೈಯಕ್ತಿಕ ನಡತೆ ಏನು? ಈ ಪ್ರಶ್ನೆಗಳ ಬಗ್ಗೆ ಕಾಮ್ರೇಡ್ ಘೋಷ್‌ರವರ ನೈತಿಕ ಸ್ವರಗತಿ ಉನ್ನತ ಶೃತಿಯಲ್ಲಿತ್ತು ಮತ್ತು ಇವುಗಳು ಎಂದೂ ಅವರ ಕಣ್ಣಿಗೆ ಬೀಳದೆ ಇರುತ್ತಿರಲಿಲ್ಲ.

ಜೀವನದಲ್ಲಿ ಎಡಬಿಡಂಗಿತನವನ್ನು ಅವರು ತೀವ್ರವಾಗಿ ದ್ವೇಷಿಸುತ್ತಿದ್ದರು. ನಮ್ಮ ದೇಶದ ಕಮ್ಯುನಿಸ್ಟ್ ಎಂದೆನಿಸಿದ ನಾಯಕರ ಆಷಾಢಭೂತಿ ಜೀವನವನ್ನು ಹಾಗೂ ನಡವಳಿಕೆಗಳನ್ನು ಬಯಲಿಗೆಳೆದು ಅವರು ತೋರಿಸುತ್ತಿದ್ದರು: "ಅವರಲ್ಲಿ ಅನೇಕ ನಾಯಕರಿಗೆ ವೈಯಕ್ತಿಕ ಆಸ್ತಿ, ಸ್ವಂತ ಮನೆ ಮತ್ತು ಕಾರುಗಳಿವೆ. ದೈನಂದಿನ ಬಳಕೆಗೆ ಅಗತ್ಯಕ್ಕಿಂತಲೂ ಹೆಚ್ಚು ಬಟ್ಟೆಬರೆಗಳೂ ಹಾಗೂ ಟೀ ಪಾರ್ಟಿಗಳಲ್ಲಿ ಮತ್ತು ವಿದೇಶಕ್ಕೆ ಹೋದಾಗ ಧರಿಸಲು ಕೂಡ ಸಾಕಷ್ಟು ಜೊತೆ ಉಡುಪುಗಳಿವೆ. ಆದರೆ ರೈತ–ಕಾರ್ಮಿಕರ ಬಳಿ ಹೋಗುವಾಗ ಅವರು ಮಹಾತ್ಯಾಗ ಮೂರ್ತಿಗಳೋ ಎಂಬಂತೆ ಸಾಮಾನ್ಯರ ಉಡುಪಿನಲ್ಲೇ ಹೋಗುತ್ತಾರೆ!" ಅವರು ತೀಕ್ಷ್ಣವಾಗಿ ಕೇಳುತ್ತಿದ್ದರು: "ಬೂರ್ಜ್ವಾ ಆಷಾಢಭೂತಿಗಳಂತೆ ಇಂತಹ ಸುಳ್ಳಿನಿಂದ ತಮ್ಮ ವೈಯಕ್ತಿಕ ಜೀವನ ಶೈಲಿಯನ್ನು ಬಚ್ಚಿಡುವ ಉದ್ದೇಶವಾದರೂ ಏನು? ಇದು ಕಾರ್ಮಿಕರನ್ನು ವಂಚಿಸುವುದಲ್ಲವೇ? ಇದು ಜನತೆಯನ್ನು ಮೋಸಗೊಳಿಸುವುದಲ್ಲದೆ ಮತ್ತೇನು?"

ಆದ್ದರಿಂದಲೇ ಅವರು ಕ್ರಾಂತಿಕಾರಿ ಕಾರ್ಯಕರ್ತರಿಗೂ ಶ್ರಮಜೀವಿಗಳಿಗೂ ಯಾವಾಗಲೂ ಪ್ರೇರೇಪಿಸುತ್ತಿದ್ದರು: "ನೀವು ಕ್ರಾಂತಿಕಾರಿ ಆದರ್ಶಗಳನ್ನು ಕಲಿಯಬೇಕಾಗಿದ್ದಲ್ಲಿ ಯಾರು ತಮ್ಮ ಜೀವನವನ್ನು ಮಾರ್ಕ್ಸ್‌ವಾದಿ–ಲೆನಿನ್‌ವಾದಿ ತತ್ವಗಳ ಆಧಾರದಲ್ಲಿ ನಡೆಸಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತಿದ್ದಾರೋ, ಇಂತಹ ಹೋರಾಟಗಳಲ್ಲಿ ತಲ್ಲೀನರಾಗಿದ್ದಾರೋ ಹಾಗೂ ಅದರಲ್ಲಿ ಯಶಸ್ವಿಯಾಗಿದ್ದಾರೋ ಅವರಿಂದ ಮಾತ್ರವೇ ಕಲಿಯಿರಿ. ತಮ್ಮ ವೈಯಕ್ತಿಕ ಜೀವನದಲ್ಲಿ ಬೂರ್ಜ್ವಾ ಸಂಸ್ಕೃತಿ, ನೀತಿ, ಆಚರಣೆ ಮತ್ತು ಹವ್ಯಾಸಗಳಿಗೆ ಇನ್ನೂ ಬಲಿಯಾಗಿರುವವರಿಂದ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಕಲಿಯಬೇಡಿ. ಏಕೆಂದರೆ ಅಂತಹವರು ಮಾರ್ಕ್ಸ್‌ವಾದದ ಹೆಸರಿನಲ್ಲಿ ಬೋಧಿಸುವುದು ಮಾರ್ಕ್ಸ್‌ವಾದದ ಹೊರತಾಗಿ ಇನ್ನೇನೋ ಆಗಿರುತ್ತದೆ. ಯಾವ ಪಕ್ಷದಲ್ಲಿ ನಾಯಕರು, ಕಾರ್ಯಕರ್ತರು ತಮ್ಮ ವೈಯಕ್ತಿಕ ಜೀವನದಲ್ಲಿ ಇಚ್ಛಾನುಸಾರವಾಗಿ ವರ್ತಿಸುವ

ಅಭ್ಯಾಸವನ್ನು ಹೊಂದಿರುತ್ತಾರೋ, ನೀತಿ, ಸೌಂದರ್ಯ ಪ್ರಜ್ಞೆ , ಸಂಸ್ಕೃತಿಗಳಿಗೆ ಸಂಬಂಧಿಸಿದ ನಡವಳಿಕೆಗಳ ಬಗ್ಗೆ ಸದಾ ವೈಯಕ್ತಿಕ ವಿವರಣೆಗಳನ್ನು ನೀಡಿ, ಕುತರ್ಕದಿಂದ ಸಮರ್ಥಿಸಿಕೊಳ್ಳುವಂತಹವರಾಗಿರುತ್ತಾರೋ – ಅಂತಹ ಪಕ್ಷದ ಗುಣಲಕ್ಷಣವು ಒಂದು ಪೆಟ್ಟಿ ಬೂರ್ಜ್ವಾ ಪಕ್ಷದ ಗುಣಲಕ್ಷಣವಾಗಬಹುದು; ಆದರೆ ಒಂದು ನೈಜ ಮಾರ್ಕ್ಸ್‌ವಾದಿ ಪಕ್ಷ ಇಂತಹ ಪ್ರವೃತ್ತಿ ಬೆಳೆಯಲು ಎಂದಿಗೂ ಅವಕಾಶ ನೀಡುವುದಿಲ್ಲ. ಮಾರ್ಕ್ಸ್‌ವಾದ–ಲೆನಿನ್‌ವಾದದ ಹೆಸರಿನಲ್ಲಿ ಈ ರೀತಿಯಲ್ಲಿ ನಡೆದುಕೊಳ್ಳುವ ಪಕ್ಷ ನಿಜಸ್ಥಿತಿಯಲ್ಲಿ ಮಾರ್ಕ್ಸ್‌ವಾದದ ಮುಖವಾಡ ಧರಿಸಿರುವ ಒಂದು ಪೆಟ್ಟಿ ಬೂರ್ಜ್ವಾ ಪಕ್ಷವಾಗಿರುತ್ತದೆ.” ಆರ್‌ಎಸ್‌ಪಿ ಪಕ್ಷದ ಆರಂಭದ ದಿನಗಳಲ್ಲಿ ತಮ್ಮ ಬದುಕಿನ ಸಾಕ್ಷಾತ್ಕಾರವನ್ನು ಆಧರಿಸಿ ಅವರು ಈ ಪ್ರಶ್ನೆಯನ್ನು ಮಂಡಿಸಿದರು: ಯಾರು ಈ ಹೊಸ ಪಕ್ಷವನ್ನು ಕಟ್ಟಲು ಮುಂದೆ ಬರಲಿಚ್ಛಿಸುತ್ತೀರೋ ಅವರು, ಮಾರ್ಕ್ಸ್‌ವಾದ–ಲೆನಿನ್‌ವಾದದ ವಿಚಾರಧಾರೆಯ ಆಧಾರದಲ್ಲಿ, ಜೀವನದ ಎಲ್ಲಾ ರಂಗಗಳನ್ನು ಆವರಿಸಿದಂತೆ ಕಮ್ಯುನಿಸ್ಟರಾಗಿ ಚಾರಿತ್ರ್ಯವನ್ನು ಪುನರ್‌ರೂಪಿಸಿಕೊಳ್ಳುವ ಹೋರಾಟದಲ್ಲಿ ನಿಮ್ಮನ್ನೇ ತೊಡಗಿಸಿಕೊಳ್ಳಬೇಕು. ಏಕೆಂದರೆ ಪೆಟ್ಟಿ ಬೂರ್ಜ್ವಾ ರಾಷ್ಟ್ರವಾದಿ ವಿಚಾರಧಾರೆಯ ಮಾರ್ಗದರ್ಶನದಲ್ಲಿ ಈವರೆಗೂ ಸ್ವಾತಂತ್ರ್ಯ ಚಳುವಳಿಯಲ್ಲಿದ್ದು ಈ ಪಕ್ಷವನ್ನು ಕಟ್ಟಲು ಮುಂದೆ ಬಂದಿರುವ ನಾವು ಪೆಟ್ಟಿ ಬೂರ್ಜ್ವಾ ಮನೋಭಾವ, ಆಲೋಚನಾ ಪ್ರಕ್ರಿಯೆ, ನೈತಿಕ–ಸಾಂಸ್ಕೃತಿಕ ಪರಿಕಲ್ಪನೆಯನ್ನು ಹೊಂದಿರುತ್ತೇವೆ. ಆದ್ದರಿಂದ ನಾವು, ಈ ಹೊಸ ಪಕ್ಷವನ್ನು ಕಾರ್ಮಿಕವರ್ಗ ಅಂತರರಾಷ್ಟ್ರೀಯತಾವಾದದ ಆಧಾರದಲ್ಲಿ ಕಟ್ಟಬೇಕಾದರೆ ಪ್ರಪ್ರಥಮವಾಗಿ ತೀಕ್ಷ್ಣ ಹೋರಾಟದ ಮೂಲಕ ಮಾರ್ಕ್ಸ್‌ವಾದಿ ದೃಷ್ಟಿಕೋನ, ಆಲೋಚನಾ ಪ್ರಕ್ರಿಯೆ ಹಾಗೂ ಮನೋಭಾವಗಳನ್ನು ಬೆಳೆಸಿಕೊಳ್ಳಬೇಕು. ಇವನ್ನು ಸಾಧಿಸಿದಾಗ ಮಾತ್ರವೇ ನಾವು ಒಂದು ನೈಜ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷವನ್ನು ರಚಿಸಲು ಸಮರ್ಥರಾಗುತ್ತೇವೆ. ಇಲ್ಲದಿದ್ದರೆ ಮಾರ್ಕ್ಸ್‌ವಾದ–ಲೆನಿನ್‌ವಾದಕ್ಕೆ ನಿಷ್ಠೆಯಿದ್ದು ಒಂದು ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷವನ್ನು ಕಟ್ಟಲಿಕ್ಕಾಗಿ ಮನಃಪೂರ್ವಕ ಇಷ್ಟಪಟ್ಟರೂ, ತಪ್ಪು ಪ್ರಕ್ರಿಯೆಯನ್ನು ಅನುಸರಿಸುವುದರಿಂದ, ನಮ್ಮ ಪಕ್ಷವೂ ಕೂಡ ಇತರ ಪಕ್ಷಗಳಂತೆ ಒಂದು ಪೆಟ್ಟಿ ಬೂರ್ಜ್ವಾ ಪಕ್ಷವಾಗಿ ಅಧ:ಪತನಕ್ಕೆ ಒಳಗಾಗುತ್ತದೆ.

ಈ ಸಾಕ್ಷಾತ್ಕಾರದ ಆಧಾರದಲ್ಲಿ ತಮ್ಮ ನಾಯಕರಿಗೆ ಯೋಗ್ಯ ಗೌರವ ಸೂಚಿಸುತ್ತಾ ಅವರು ಹೇಳಿದರು: ನಿಮ್ಮ ಗುಣನಡತೆಯಿಂದ ಸ್ಫೂರ್ತಿಹೊಂದಿ ಆಕರ್ಷಿತರಾಗಿ ನಾವು ಸ್ವಾತಂತ್ರ್ಯ ಸಂಗ್ರಾಮವನ್ನು ಸೇರಿದೆವು. ನಾನು ಹೃತ್ಪೂರ್ವಕವಾಗಿ ನಿಮ್ಮನ್ನು ಗೌರವಿಸುತ್ತೇನೆ. ನನ್ನ ಕೊನೆಯುಸಿರಿನವರೆಗೂ ನಿಮ್ಮನ್ನು ಪೂಜ್ಯಸ್ಥಾನದಲ್ಲಿರಿಸಿಕೊಳ್ಳುತ್ತೇನೆ. ಆದರೆ ನಾವು

ಕಟ್ಟುವ ಕಾರ್ಮಿಕವರ್ಗದ ನೈಜ ಕ್ರಾಂತಿಕಾರಿ ಪಕ್ಷವನ್ನು ನೀವು ಸೇರಬೇಕಾದರೆ ನೀವೂ ಕೂಡ ಕಮ್ಯುನಿಸ್ಟ್ ಚಾರಿತ್ರ್ಯವನ್ನು ಗಳಿಸಿಕೊಳ್ಳುವ ಈ ಹೋರಾಟದಲ್ಲಿ ನಿರತರಾಗಬೇಕು. ಇದರಲ್ಲಿ ಯಶಸ್ಸನ್ನು ಗಳಿಸಿದ ನಂತರವೇ ನೀವು ಈ ಹೊಸ ಪಕ್ಷದ ನೇತೃತ್ವ ವಹಿಸಬಹುದು.

ಈ ಕ್ರಾಂತಿಕಾರಿ ಚಿಂತನೆಯ ಮಾರ್ಗದರ್ಶನದಲ್ಲಿ ಕಾಮ್ರೇಡ್ ಘೋಷ್‌ರವರು ಒಂದು ನೈಜ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷವನ್ನು ಕಟ್ಟುವ ಪ್ರಾಥಮಿಕ ಸಿದ್ಧತೆನಡೆಸಲಿಕ್ಕಾಗಿ ಸೆರೆಮನೆಯೊಳಗೆ ಎಡೆಬಿಡದೆ ಕಠಿಣವಾದ ಹೋರಾಟವನ್ನು ಆರಂಭಿಸಿದರು. ಇದನ್ನು ಕಣ್ಣಾರೆ ನೋಡದವರಿಗೆ ಅವರು ಹಗಲು ರಾತ್ರಿ ಕೈಗೊಂಡ ಪರಿಶ್ರಮದಾಯಕ ಹೋರಾಟವನ್ನು ನಂಬುವುದು ಕಷ್ಟ. ಮಿಕ್ಕವರೆಲ್ಲಾ ಕಾಲಕಾಲಕ್ಕೆ ಆಹಾರ ವಿಶ್ರಾಂತಿಗಳನ್ನು ತೆಗೆದುಕೊಂಡರೆ ಅವರ ಆಹಾರ  ಒಣಗಿಹೋಗುತ್ತಿತ್ತು; ಆಹಾರ ವಿಶ್ರಾಂತಿಗಳನ್ನು ತೆಗೆದುಕೊಳ್ಳಲೂ ಅವರಿಗೆ ಬಿಡುವೇ ಆಗುತ್ತಿರಲಿಲ್ಲ. ಉಳಿದವರು ನೋಡಿಕೊಳ್ಳದಿದ್ದರೆ ಅವರ ಬಟ್ಟೆಬರೆ ಹಾಗೂ ಇತರ ಸಾಮಗ್ರಿಗಳು ಉಪೇಕ್ಷೆಗೊಳಗಾಗಿರುತ್ತಿದ್ದವು.  ಇವುಗಳ ಬಗ್ಗೆ ಅವರು ಸಂಪೂರ್ಣವಾಗಿ ನಿರಾಸಕ್ತರಾಗಿರುತ್ತಿದ್ದರು. ಹಲವು ರಾತ್ರಿಗಳನ್ನು ಅವರು ನಿದ್ದೆಯಿಲ್ಲದೆ ಕಳೆಯುತ್ತಿದ್ದರು. ಅವರೊಬ್ಬ ಉಜ್ವಲ ವಿದ್ಯಾರ್ಥಿಯಾಗಿದ್ದುದರಿಂದ ಘೋಷ್‌ರವರಿಗೆ ಸೆರೆಮನೆಯೊಳಗೆ ಅವರ ನಾಯಕರನ್ನೊಳಗೊಂಡು ಎಲ್ಲರೂ ಪರೀಕ್ಷೆಗಳಿಗೆ ಕುಳಿತು ಪದವಿಗಳನ್ನು ಗಳಿಸುವಂತೆ ಬುದ್ಧಿವಾದ ಹೇಳುತ್ತಿದ್ದರು; ಹಲವು ರಾಜಕೀಯ ಕೈದಿಗಳಿಗೆ ಈ ರೀತಿ ಮಾಡುವುದು ಸಾಮಾನ್ಯವಾದ ವಾಡಿಕೆಯಾಗಿತ್ತು. ಆದರೆ ಇವೆಲ್ಲಾ ಬುದ್ಧಿವಾದಗಳು ವ್ಯರ್ಥವಾದವು –  ಕಾರಣ ಅವರಿಗೆ ಕ್ರಾಂತಿಯನ್ನುಳಿದು ಬೇರೆಕಡೆ ಲಕ್ಷ್ಯವಿರಲಿಲ್ಲ. ಅಚಲ ಶ್ರದ್ಧೆಯಿಂದ ಅವರು ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷವನ್ನು ಕಟ್ಟುವ ಏಕೈಕ ಧ್ಯೇಯದಿಂದ ಪ್ರಜ್ಞಾಪೂರ್ವಕವಾದ ಹಾಗೂ ಪರಿಶ್ರಮದಾಯಕವಾದ ಹೋರಾಟವನ್ನು ನಡೆಸಿದರು.

ಆದ್ದರಿಂದ 1945ರಲ್ಲಿ ಸೆರೆಮನೆಯಿಂದ ಬಿಡುಗಡೆ ಹೊಂದಿದ ನಂತರ ಈ ಏಕಮಾತ್ರ ಕ್ರಾಂತಿಕಾರಿ ಧ್ಯೇಯೋದ್ದೇಶಗಳಿಂದ ಮೊದಲಿನಂತೆಯೇ ಪಕ್ಷವನ್ನು ಕಟ್ಟುವ ಎಡೆಬಿಡದ, ಪ್ರಜ್ಞಾಪೂರ್ವಕವಾದ ಹೋರಾಟವನ್ನು ಮುಂದುವರಿಸಿದರು. ದ್ವಂದ್ವಾತ್ಮಕ ವಸ್ತುವಾದದ ಆಲೋಚನಾ ಕ್ರಮ ಹಾಗೂ ವಿಶ್ಲೇಷಣಾ ವಿಧಾನಗಳ ಆಧಾರದಲ್ಲಿ ಜೀವನದ ಎಲ್ಲಾ ರಂಗಗಳನ್ನಾವರಿಸಿದ ಒಂದು ತೀಕ್ಷ್ಣ ಸ್ವರೂಪದ ವೈಚಾರಿಕ ಹೋರಾಟದ ಮೂಲಕ ಪಕ್ಷದ ಸದಸ್ಯ ಕಾರ್ಯಕರ್ತರಲ್ಲಿ – ಚಿಂತನೆಯಲ್ಲಿ ಸಾಮ್ಯತೆ, ಏಕರೀತಿಯ ಆಲೋಚನಾ ಪ್ರಕ್ರಿಯೆ, ಏಕೀಕೃತ ಧೋರಣೆ ಹಾಗೂ ಧ್ಯೇಯದಲ್ಲಿ ಏಕತೆಯನ್ನು ಸಾಧಿಸಲು ಯತ್ನಿಸಿದರು. ಈ ಮೂಲಕ  ಆರ್‌ಎಸ್‌ಪಿಯನ್ನು ಒಂದು ಅಕೃತ್ರಿಮ

ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷವನ್ನಾಗಿ ರೂಪಿಸಲು ಅವರು ಆರಂಭಿಸಿದ ಹೋರಾಟ ಗುರಿ ಮುಟ್ಟಲಿಲ್ಲ. ಆದರೆ ಜೈಲಿನ ಒಳಗೂ ಹೊರಗೂ ಆರ್‌ಎಸ್‌ಪಿಯೊಳಗಿನ ಹೋರಾಟದ ಮುಂದುವರಿಕೆಯಲ್ಲೂ ಆನಂತರ ಅದರೊಂದಿಗೆ ಸಂಪೂರ್ಣ ಭೇದ ಏರ್ಪಡಿಸಿಕೊಂಡೂ, ತೀಕ್ಷ್ಣ ವೈಚಾರಿಕ ಹೋರಾಟಗಳಿಂದ ವೈಚಾರಿಕ ಕೇಂದ್ರೀಯತೆಯನ್ನು ಬೆಳೆಸುತ್ತಾ ಈ ಪ್ರಕ್ರಿಯೆಯಲ್ಲಿ ಅವರು ಸಮರ್ಪಿತ ಕ್ರಾಂತಿಕಾರಿಗಳ (Professional revolutionaries) ಪಡೆಯೊಂದನ್ನು ಸೃಷ್ಟಿಸಿ ಅವರೊಂದಿಗೆ – ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಎಸ್‌ಯುಸಿಐ) ಪಕ್ಷಕ್ಕೆ ಜನ್ಮನೀಡುವಲ್ಲಿ ಯಶಸ್ವಿಯಾದರು.

ಅತ್ಯಂತ ಕಠಿಣವಾದ ಮತ್ತು ಉಗ್ರವಾದ ಹೋರಾಟದ ಹೊಸಮಜಲು ಇದರೊಂದಿಗೆ ಆರಂಭವಾಯಿತು. ಕೈಬೆರಳೆಣಿಕೆಯಷ್ಟು ಕ್ರಾಂತಿಕಾರಿ ಸಹಯೋಧರೊಡಗೂಡಿ ಅತ್ಯಂತ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ಈ ಪಕ್ಷ ಎಸ್‌ಯುಸಿಐ ಅನ್ನು ಕಟ್ಟಿದರು. ಅದರ ಸಲುವಾಗಿ ಅವರು ನಡೆಸಿದ ಪರಿಶ್ರಮದಾಯಕ ಹಾಗೂ ವೇದನಾದಾಯಕ ಹೋರಾಟವೂ, ಎದುರಿಸಿದ ಬೆಟ್ಟದಷ್ಟು ಕಷ್ಟಗಳೂ ಯಾವ ಕಲ್ಪನೆಗೂ ನಿಲುಕಲಾರವು. ಅದನ್ನು ನಮ್ಮ ಪಕ್ಷದ ಬೆಳವಣಿಗೆಯ ಈ ಹಂತದಲ್ಲೂ ನಂಬಲಿಕ್ಕಾಗಲೀ, ಕಲ್ಪಿಸಿಕೊಳ್ಳುವುದಾಗಲೀ ಯಾರಿಗಾದರೂ ಅತಿ ಕಷ್ಟಕರ. ಎಂತಹ ಕ್ರಾಂತಿಕಾರಿ ಶ್ರದ್ಧಾಭಾವದಿಂದ, ಎಂತಹ ಕ್ರಾಂತಿಕಾರಿ ಧ್ಯೇಯದಿಂದ ಅವರು ಇದನ್ನು ಸಾಧಿಸಿದರೆಂಬುದನ್ನು ಇತರರು ಕಲ್ಪಿಸಿಕೊಳ್ಳುವುದು ಇನ್ನೂ ಕಷ್ಟ! ಪ್ರಾಯಶಃ ಕಮ್ಯುನಿಸ್ಟ್ ಪಕ್ಷಗಳನ್ನು ರಚಿಸುವ ಪ್ರಪಂಚದ ಇಡೀ ಇತಿಹಾಸದಲ್ಲೇ ಇದಕ್ಕೆ ಸಮಾನಾಂತರ ಉದಾಹರಣೆ ಇರಲಾರದು.

ಅವರಿಗೆ ಹಾಗೂ ಅವರ ಕೆಲವೇ ಮಂದಿ ನಿಷ್ಠಾವಂತ ಕ್ರಾಂತಿಕಾರಿ ಸಹಯೋಧರಿಗೆ ತಲೆಯ ಮೇಲೊಂದು ಸೂರಾಗಲೀ, ವಾಸಸ್ಥಾನವಾಗಲಿ, ಆಹಾರ ಸಾಮಗ್ರಿಗಳಾಗಲಿ, ಪ್ರಯಾಣದ ಅವಶ್ಯಕ ಕನಿಷ್ಠ ಹಣವಾಗಲಿ, ಪೂರಕವಾದ ಪರಿಸರವಾಗಲಿ, ಪ್ರೋತ್ಸಾಹಿಸುವವರಾಗಲಿ, ಯಾವುದೂ ಇರಲಿಲ್ಲ. ಆದರೆ ಅವರ ಬಳಿ ಇದ್ದದ್ದು ಭಾರತದಲ್ಲಿ ಒಂದು ಹೊಸದಾದ, ಕಾರ್ಮಿಕವರ್ಗದ ಅಕೃತ್ರಿಮವಾದ ಕ್ರಾಂತಿಕಾರಿ ಪಕ್ಷವನ್ನು ಕಟ್ಟಬಹುದೆಂಬ ದೃಢವಿಶ್ವಾಸ ಹಾಗೂ ಇದನ್ನಾಧರಿಸಿದ ಅಚಲ ನಿರ್ಧಾರ. ಭಾರತದಂತಹ ವಿಶಾಲ ದೇಶದಲ್ಲಿ ಹಾಗೂ ಮಿತಿಯಿಲ್ಲದಂತಹ ಅಡೆತಡೆಗಳ ಮಧ್ಯೆ ಈ ಅತ್ಯಲ್ಪ ಜನಬಲ ಮತ್ತು ಬೆಂಬಲಗಳೊಂದಿಗೆ ಕ್ರಾಂತಿಯನ್ನು ಯಶಸ್ವಿಗೊಳಿಸಲು ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ಯತ್ನವು ಮತಿಭ್ರಮಣೆಯ ಕಾರ್ಯವಲ್ಲದಿದ್ದರೂ, ಖಂಡಿತವಾಗಿಯೂ

ಅಸಾಧ್ಯವಾದುದು ಎಂದೆಣಿಸಿ ಆ ದಿನಗಳಲ್ಲಿ ಪ್ರತಿಯೊಬ್ಬರೂ ಈ ವಿಚಾರವನ್ನು ಅವಹೇಳನ ಮಾಡುತ್ತಿದ್ದರು.

ಆ ಸಮಯದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ಒಂದು ಅಖಿಲ ಭಾರತ ಸಂಘಟನೆಯಾಗಿ ಅಸ್ತಿತ್ವದಲ್ಲಿದ್ದು, ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದಿತ್ತು. ತನ್ಮೂಲಕ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಸಂಪೂರ್ಣ ಪ್ರತಿಷ್ಠೆಯನ್ನು ಗಿಟ್ಟಿಸಿಕೊಂಡಿತ್ತು. ಸ್ವಾಭಾವಿಕವಾಗಿ ಕಮ್ಯುನಿಸ್ಟ್ ವಿಚಾರಧಾರೆಯತ್ತ ಆಕರ್ಷಿತರಾದವರೆಲ್ಲರೂ ಸಿಪಿಐಯನ್ನು ಸೇರಿದರು. ಇನ್ನುಳಿದ ಇತರ ಸಂಘಟನೆಗಳೆಂದರೆ – ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರಿಂದ ಸ್ಥಾಪಿತಗೊಂಡಿದ್ದ ಅಖಿಲ ಭಾರತ ಫಾರ್ವರ್ಡ್ ಬ್ಲಾಕ್, ಅನುಶೀಲನ್ ಸಮಿತಿಯ ಬೆಂಬಲವನ್ನೂ ಪೋಷಣೆಯನ್ನೂ ಅನುಭೋಗಿಸುತ್ತಾ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷವೆಂದು ಸಾರಲ್ಪಟ್ಟ ಆರ್‌ಎಸ್‌ಪಿ, ಆ ದಿನಗಳಲ್ಲಿ ಸಾರ್ವಜನಿಕ ಪ್ರತಿಷ್ಠೆಯನ್ನು ಪಡೆದಂತಹ ಸೌಮೇಂದ್ರನಾಥ್ ಟಾಗೂರ್‌ರವರಿಂದ ಸ್ಥಾಪಿತಗೊಂಡ ಆರ್‌ಸಿಪಿಐ, ಎಂ.ಎನ್.ರಾಯ್‌ರವರ ಪರಂಪರೆಯನ್ನು ಹೊಂದಿದ್ದಂತಹ ಡೆಮಾಕ್ರೆಟಿಕ್ ವ್ಯಾನ್‌ಗಾರ್ಡ್ (Democratic Vanguard) ಹಾಗೂ ರೇವು ಬಂದರು ಕಾರ್ಮಿಕರ ಯೂನಿಯನ್ನಿನ ಬಲ ಪಡೆದಿದ್ದ ಬೋಲ್ಷೆವಿಕ್ ಪಕ್ಷ. ಇವರಲ್ಲಿ ಪ್ರತಿಯೊಂದು ಸಂಘಟನೆಯೂ ಗಮನಾರ್ಹ ಬಲವನ್ನು ಹೊಂದಿತ್ತು.

ಯಾರ ಸಹಕಾರವೂ ಇಲ್ಲದೆ, ಯಾವ ಸಂಪನ್ಮೂಲವೂ ಇಲ್ಲದೆ, ಯಾವ ಸೌಕರ್ಯವನ್ನೂ ಹೊಂದಿರದೆ 21 ವರ್ಷದ ಒಬ್ಬ ಯುವಕ ಸಮವಯಸ್ಕರಾದ ಕೆಲವೇ ಸಹಯೋಧರೊಂದಿಗೆ, ಎಲ್ಲಾ ಅಡೆತಡೆಗಳನ್ನು ಎದುರಿಸಿ ಹೇಗೆ ತಾನೆ ಕಾರ್ಮಿಕವರ್ಗದ ಕ್ರಾಂತಿಕಾರಿ ಪಕ್ಷವನ್ನು ಕಟ್ಟಬಹುದೆಂಬುದನ್ನು ಯಾರೂ ಕನಸಿನಲ್ಲೂ ಎಣಿಸಲಾಗುತ್ತಿರಲಿಲ್ಲ. ಆದರೆ ಅವರ ಕ್ರಾಂತಿಕಾರಿ ಚಾರಿತ್ರ್ಯದಲ್ಲಿ ಎಂತಹ ಅನನ್ಯ ದೃಢತೆಯಿತ್ತೆಂದರೆ ಅವರು ಸತ್ಯವೆಂದು ಅರಿತದ್ದನ್ನು ಯಾವಾಗಲೂ ಆಚರಣೆಯಲ್ಲಿ ತರಲು ಯತ್ನಿಸುತ್ತಿದ್ದರು; ಏನೇ ಬರಲಿ, ಎಷ್ಟೇ ಅಡೆತಡೆಗಳು ಉಂಟಾಗಲಿ ಅವರನ್ನು ಎದೆಗುಂದಿಸಲಾಗುತ್ತಿರಲಿಲ್ಲ. ಬದಲಿಗೆ ಕಷ್ಟಗಳು ಹಾಗೂ ಪ್ರತಿಕೂಲ ಪರಿಸ್ಥಿತಿಗಳು ಹೆಚ್ಚಾದಂತೆ ಅವರು ತಮ್ಮ ಹೋರಾಟಗಳಲ್ಲಿ ಹೆಚ್ಚು ದೃಢವಾದ ಹಾಗೂ ನಿರ್ಣಾಯಕವಾದ ಧೋರಣೆಯನ್ನು ತಳೆಯುತ್ತಿದ್ದರು. ಎಲ್ಲಾ ಅಡೆತಡೆಗಳ ವಿರುದ್ಧ ಅವರು ಏಕಚಿತ್ತದಿಂದ ಮುನ್ನುಗ್ಗಿ ಪಕ್ಷಕ್ಕೆ ಒಂದು ದೃಢವಾದ ಅಡಿಪಾಯವನ್ನು ಹಾಕಿದರು. ಅವರು ಹೇಳುತ್ತಿದ್ದರು: "ಬೀದಿಯಲ್ಲೇ ಮಡಿದು, ಇದು ಭಾರತದ ಕ್ರಾಂತಿಗೆ ಅವಶ್ಯಕವೆಂದು ಪರಿಗಣಿಸುವುದೇ ಮೇಲು ಎಂದು ನಾನು ಭಾವಿಸುತ್ತೇನೆ. ನಾನು ಸಾಯಬೇಕಾದಲ್ಲಿ ನನ್ನ ತಲೆ ಎತ್ತಿ ಗೌರವದಿಂದ ಸಾಯುತ್ತೇನೆ."

ಅನೇಕಬಾರಿ ಪಕ್ಷದ ಕಾರ್ಯಕರ್ತರಿಗೆ ಹೇಳುತ್ತಿದ್ದರು: ಕ್ರಾಂತಿಯ ಅವಶ್ಯಕತೆಯ ಅರಿವು ನನ್ನಿಂದ ಏನನ್ನೇ ಬಯಸಿದರೂ ಅದನ್ನು ನಿರ್ವಹಿಸಲು ನಾನು ಅಸಮರ್ಥನೆಂದು ಯೋಚಿಸುವುದನ್ನೂ ಸಹ ನನಗೆ ಕಲ್ಪಿಸಿಕೊಳ್ಳಲಾಗುತ್ತಿರಲಿಲ್ಲ. ಕ್ರಾಂತಿಕಾರಿಯೊಬ್ಬ ಯಾವುದನ್ನೇ ಆಗಲಿ ಅಸಾಧ್ಯ ಎಂದು ಯೋಚಿಸುವುದು ಅತ್ಯಂತ ಅಪಮಾನಕರ ಎಂದು ನಾನು ಭಾವಿಸುತ್ತೇನೆ.

ಕಾಮ್ರೇಡ್ ಘೋಷ್ ಹಾಗೂ ಅವರ ಕ್ರಾಂತಿಕಾರಿ ಸಹಯೋಧರು ದಿನಗಟ್ಟಲೆ ಹಸಿವೆಯಿಂದಿರಬೇಕಾಗಿತ್ತು. ಅವರೆಲ್ಲರೂ ಜೊತೆಗೂಡಿ ದಕ್ಷಿಣ ಕಲ್ಕತ್ತೆಯ ಒಂದು ಗಾಳಿಬೆಳಕಿಲ್ಲದ ಮುರುಕಲು ಗುಡಿಸಲಿನಲ್ಲಿ ವಾಸಿಸುತ್ತಿದ್ದರು. ಅಲ್ಲಿಯೇ ಪಕ್ಷದ ಮೊದಲ ಕಮ್ಯೂನ್ (Commune) ಅನ್ನು ಆರಂಭಿಸಿದರು. ಹಾಸಿಗೆಗಾಗಿ ಅವರು ಬಳಸುತ್ತಿದ್ದದು ಒಂದು ಚಾಪೆಯನ್ನಷ್ಟೇ. ಅವರ ಊಟವೆಂದರೆ ಸ್ವಲ್ಪ ಉಪ್ಪು ಮಿಶ್ರಿತ ಅನ್ನ ಅದೂ ದೊರಕಿದಾಗ. ಹಲವು ಬಾರಿ ಅವರೆಲ್ಲಾ ಒಂದೇ ಜೊತೆ ಹೊರ ಉಡುಪನ್ನು ತಮ್ಮಲ್ಲೇ ಸರದಿಯ ಮೇಲೆ ಧರಿಸಿಕೊಳ್ಳಬೇಕಾಗಿತ್ತು. ಈ ರೀತಿ ಅವರು ಪಕ್ಷವನ್ನು ಕಟ್ಟಲು ಅತಿಮಾನುಷ ಹೋರಾಟದಲ್ಲಿ ಹಗಲೆನ್ನದೆ ರಾತ್ರಿಯೆನ್ನದೆ ತಮ್ಮನ್ನೇ ತೊಡಗಿಸಿಕೊಂಡರು.

ಹೀಗಿದ್ದರೂ ಸಹ ತಾವು ಏನೋ ತ್ಯಾಗ ಮಾಡುತ್ತಿದ್ದೇವೆಂದು ಅವರು ಎಂದೂ ಯೋಚಿಸಲಿಲ್ಲ. ಆಗಾಗ್ಗೆ ಕಾಮ್ರೇಡ್ ಘೋಷ್‌ರು ಹೇಳುತ್ತಿದ್ದರು: "ಒಬ್ಬ ಕ್ರಾಂತಿಕಾರಿಗೆ ಕ್ರಾಂತಿಗಿಂತ ಉದಾತ್ತವಾದದ್ದೇನೂ ಇಲ್ಲ. ಕ್ರಾಂತಿಕಾರಿ ಜೀವನಕ್ಕಿಂತ ಅಮೂಲ್ಯವಾದದ್ದೇನೂ ಇಲ್ಲ. ಆದ್ದರಿಂದಲೇ ಕ್ರಾಂತಿಯ ಹಿತಾಸಕ್ತಿಯಲ್ಲಿ, ಕ್ರಾಂತಿಕಾರಿ ಜೀವನವನ್ನು ನಡೆಸಬೇಕಾಗಿ ಬಂದಾಗ, ಅವನು ಎಲ್ಲವನ್ನೂ – ತನ್ನ ಜೀವವನ್ನೂ ಸಹ – ತ್ಯಜಿಸಬೇಕಾಗಿ ಬಂದರೂ ಅದನ್ನು ತ್ಯಾಗವೆಂದು ಪರಿಗಣಿಸುವುದೇ ಇಲ್ಲ." ಇದನ್ನವರು ತಮ್ಮ ಒಂದು ಲೇಖನದಲ್ಲಿ ಅಭಿವ್ಯಕ್ತಪಡಿಸಿದ್ದಾರೆ:

"ನಾವು ಪಕ್ಷವನ್ನು ಕಟ್ಟಲು ಆರಂಭಿಸಿದ ಆ ಮೊದಲ ದಿನಗಳಲ್ಲಿ ನಮ್ಮ ಬೆಂಬಲಕ್ಕಿದ್ದವರು ಕೆಲವೇ ಜನ. ನಮ್ಮ ವಾಸಕ್ಕಾಗಿ ನಾವು ಒಂದು ಕೊಠಡಿಯನ್ನು ಕೂಡ ದೊರಕಿಸಿಕೊಳ್ಳಲಾಗಿರಲಿಲ್ಲ. ದಿನಗಟ್ಟಲೆ ನಾವು ಆಹಾರವಿಲ್ಲದೆಯೇ ಶ್ರಮಿಸಬೇಕಿತ್ತು. ಆದರೆ ಇದರ ಬಗ್ಗೆ ನಮಗೆ ಯಾವುದೇ ಕೊರಗಿರಲಿಲ್ಲ. ಅನೇಕ ವರ್ಷಗಳನ್ನು ನಾವು ಒಂದೇ ಚಾಪೆಯಲ್ಲೇ ಕಳೆದೆವು. ಹೀಗೇ ಹಲವು ಚಳಿಗಾಲಗಳು ಕಳೆದುಹೋದವು. ನಮ್ಮ ಹಳೆಯ ಸ್ನೇಹಿತರು ಇದಕ್ಕೆ ಸಾಕ್ಷಿಯಾಗಿದ್ದಾರೆ. ಆದರೆ ನಮ್ಮ ಮನಃಶಾಂತಿಯು ಒಂದಿಷ್ಟಾದರೂ ಕಲಕಿಹೋಗಿದ್ದನ್ನು ಅವರು ಎಂದೂ ಕಾಣಲಿಲ್ಲ. ಎಷ್ಟೋಂದು ದಿನ ನಾವು ಆಹಾರವಿಲ್ಲದೆಯೇ ಕಳೆದೆವು. ಆದರೆ ಇದನ್ನು ಬೇರೆಯವರೊಂದಿಗೆ ಹೇಳಿಕೊಳ್ಳಲು

ಸಹ ನಮಗೆ ನಾಚಿಕೆಯಾಗುತ್ತಿತ್ತು. ನಾವು ಜೀವನಕ್ಕೆ ಅವಶ್ಯವಾದಂತಹ ವಸ್ತುಗಳನ್ನು ಹೊಂದಿಸಿಕೊಳ್ಳಲಾಗದಿದ್ದುದು, ನಮಗೆ ಸಾಕಷ್ಟು ಬೆಂಬಲಿಗರಿಲ್ಲದಿದ್ದುದು, ಇವೆಲ್ಲಾ ನಮ್ಮ ಪ್ರಕಾರ, ನಮ್ಮ ವೈಫಲ್ಯಗಳೇ. ಇದರ ಬಗ್ಗೆ ಹೆಮ್ಮೆಯಾದರೂ ಏಕೆ? ಇದು ಅತ್ಯುನ್ನತವಾದ ತ್ಯಾಗವಾದರೂ ಹೇಗಾಗುತ್ತದೆ? ಇದನ್ನು ಹೇಳಿಕೊಳ್ಳುವುದೂ ಸಹ ನಾಚಿಕೆಯ ವಿಷಯವಾಗುತ್ತಿತ್ತು." ಹೀಗೆ ಕಾಮ್ರೇಡ್ ಘೋಷ್‌ರವರಲ್ಲಿ ಕಾರ್ಮಿಕವರ್ಗದ ನೀತಿ ಮತ್ತು ಸಂಸ್ಕೃತಿಗಳ ಅಭಿವ್ಯಕ್ತಿ ಇಷ್ಟೊಂದು ಎತ್ತರಕ್ಕೆ ಬೆಳೆದಿತ್ತು!

ಈ ಅನನ್ಯ ಕ್ರಾಂತಿಕಾರಿ ಚಾರಿತ್ರ್ಯ ಹಾಗೂ ಗಾಢವಿವೇಕವು ಜನತೆಯನ್ನು ಅಯಸ್ಕಾಂತದಂತೆ ಆಕರ್ಷಿಸಿತು. ಆನಂತರದ ಕಾಲದಲ್ಲಿ ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳ ಪ್ರತಿಭಾವಂತ ವಿದ್ಯಾರ್ಥಿಗಳೂ ಕೂಡ ಅವರು ನಡೆಸುತ್ತಿದ್ದ ಅಧ್ಯಯನ ತರಗತಿಗಳಿಗೆ ಬರುತ್ತಿದ್ದರು. ಆದರೆ ಪಕ್ಷ ನಿರ್ಮಾಣದ ಮೊದಲ ದಿನಗಳಲ್ಲಿ ಅವರು ಯಾರಾದರೂ ಆಸಕ್ತಿ ತೋರಿಸುತ್ತಿದ್ದಾರೆಂದು ಕೇಳಿದಾಕ್ಷಣವೇ ಅವರ ಬಳಿ ಧಾವಿಸುತ್ತಿದ್ದರು. ಮೈಲಿಗಟ್ಟಲೆ ನಡೆದಾದರೂ ಅವರಲ್ಲಿ ಹೋಗಿ ಗಂಟೆಗಟ್ಟಲೆ ಚರ್ಚಿಸುತ್ತಿದ್ದರು. ಹೀಗೆ ಕಲ್ಪನಾತೀತ ಹೋರಾಟ ಹಾಗೂ ವೇದನಾದಾಯಕ ಪರಿಶ್ರಮದ ಮೂಲಕ ಅವರು ಒಬ್ಬರಾದ ಮೇಲೊಬ್ಬರನ್ನು ಒಪ್ಪಿಸಿ ಕಾರ್ಯಕರ್ತರನ್ನು ಹೆಚ್ಚಿಸಿಕೊಂಡರು. ಆ ದಿನಗಳಲ್ಲಿ ಒಬ್ಬ ಕಾರ್ಯಕರ್ತ ದೊರೆಯಬೇಕಾದರೂ ಎಷ್ಟೊಂದು ಕಷ್ಟವಿತ್ತು! ಮೊದಲಿಗೆ ಎಲ್ಲಾ ರೀತಿಯ ಶೋಷಣೆಗಳಿಂದ ಜನತೆಯ ವಿಮುಕ್ತಿಗೆ ವೈಜ್ಞಾನಿಕ ಸಮಾಜವಾದವೊಂದೇ ಏಕೈಕ ಹಾದಿ ಎಂಬುದನ್ನು ಒಪ್ಪಿಸಬೇಕು. ಆನಂತರ ಅಲ್ಲಗಳೆಯಲಾಗದಂತಹ ತರ್ಕದಿಂದ ಸಿಪಿಐ ಹೆಸರಿನ ಪಕ್ಷವು ಏತಕ್ಕಾಗಿ ಒಂದು ನೈಜ ಕಮ್ಯುನಿಸ್ಟ್ ಪಕ್ಷವಾಗಿ ಬೆಳೆಯಲಿಲ್ಲವೆಂಬುದನ್ನು ಅವರಿಗೆ ಸಾಬೀತುಪಡಿಸಬೇಕು – ಈ ಕಾರ್ಯ ಆ ದಿನಗಳಲ್ಲಿ ಎಷ್ಟೊಂದು ಕಷ್ಟಕರವಾಗಿತ್ತು! ಇವೆಲ್ಲದರ ಹಿನ್ನೆಲೆಯಲ್ಲಿ ಅಂತಿಮವಾಗಿ, ಭಾರತೀಯ ಕ್ರಾಂತಿಯನ್ನು ಸಮರ್ಪಕವಾಗಿ ನೆರವೇರಿಸಲು ಕಾರ್ಮಿಕವರ್ಗದ ಒಂದು ಅಕೃತ್ರಿಮ ಕ್ರಾಂತಿಕಾರಿ ಪಕ್ಷವನ್ನು ಹೊಸದಾಗಿ ಕಟ್ಟುವ ಅನಿವಾರ್ಯ ಅವಶ್ಯಕತೆಯ ಬಗ್ಗೆ ಅವರನ್ನೆಲ್ಲಾ ಒಪ್ಪಿಸಬೇಕಿತ್ತು. ಮತ್ತೆ ಕ್ರಾಂತಿಯ ಧ್ಯೇಯಕ್ಕಾಗಿ ಓರ್ವ ಕಾರ್ಯಕರ್ತನ ಆತ್ಮವಿಶ್ವಾಸವನ್ನು ಅಚಲವಾಗಿಯೂ ಜ್ವಲಂತವಾಗಿಯೂ ಉಳಿಸಿಕೊಳ್ಳುವ ಕಾರ್ಯ ಅಷ್ಟೇ ಕಷ್ಟಕರವಾಗಿತ್ತು. ಏಕೆಂದರೆ, ಆ ದಿನಗಳಲ್ಲಿ ಪಕ್ಷವು ಇನ್ನೂ ಸಮೂಹ ಬೆಂಬಲವನ್ನೂ, ಮನ್ನಣೆಯನ್ನೂ ಗಳಿಸಿರಲಿಲ್ಲ ಹಾಗೂ ಖ್ಯಾತಿ ಹೊಂದಿದ ಸಮೂಹ ನಾಯಕನನ್ನು ಹೊಂದಿರಲಿಲ್ಲ. ಜೊತೆಗೆ ಅಂತಹ ಸಂದರ್ಭದಲ್ಲಿ ಪಕ್ಷದೊಂದಿಗೆ ಸಂಬಂಧವಿರಿಸಿಕೊಳ್ಳುವುದೆಂದರೆ ಅಪಹಾಸ್ಯ, ತಾತ್ಸಾರ

ಹಾಗೂ ವ್ಯಂಗ್ಯೋಕ್ತಿಗಳಿಗೆ ಆಹ್ವಾನವಿತ್ತಂತೆ. ಆಗ ಕ್ರಾಂತಿಕಾರಿ ಕಾರ್ಮಿಕವರ್ಗದ ಪಕ್ಷವನ್ನು ಕಟ್ಟುವ ಕಾರ್ಯದಲ್ಲಿ ಯಾರೊಬ್ಬರ ಶ್ರದ್ಧಾಭಾವವನ್ನು ಅಚಲವಾಗಿರಿಸಿಕೊಳ್ಳುವುದು ಎಷ್ಟು ಕಷ್ಟಕರವಾಗಿತ್ತೆಂಬುದನ್ನು ಇಂದಿನ ಪರಿಸ್ಥಿತಿಯಲ್ಲಿ ಕಲ್ಪಿಸಿಕೊಳ್ಳಲೂ ಅಸಾಧ್ಯ.

ಬಹುಮಟ್ಟಿಗೆ ಪಕ್ಷವು ಜನತೆಯಲ್ಲಿ ಅಜ್ಞಾತವಾಗಿದ್ದು ಎಲ್ಲಿಂದಲೂ ಯಾವುದೇ ಸಂಪನ್ಮೂಲವನ್ನಾಗಲೀ, ಬೆಂಬಲವನ್ನಾಗಲೀ ಪಡೆಯದೆ, ಪತ್ರಿಕೆಗಳ ಬೆಂಬಲವಿಲ್ಲದೆ ಕೇವಲ ತಾತ್ಸಾರ, ವ್ಯಂಗ್ಯ, ಟೀಕೆ, ಅಪಪ್ರಚಾರ, ಚಾರಿತ್ರ್ಯವಧೆಗಳನ್ನುಳಿದು ಇನ್ನೇನೂ ಸಿಗುತ್ತಿರಲಿಲ್ಲ; ಎಲ್ಲೆಲ್ಲೂ ಅಡೆತಡೆಗಳು ಚೀನಾದ ಮಹಾಗೋಡೆಯಂತೆ ನಿಂತಿದ್ದವು. ಈ ಪ್ರತಿಕೂಲ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಆಶಾದಾಯಕ ಭವಿಷ್ಯವೊಂದು ಮೇಲ್ನೋಟಕ್ಕೆ ಕಾಣಸಿಗದಿದ್ದಾಗ, ಪ್ರತಿಯೊಂದು ಹೆಜ್ಜೆಗೂ ಅಪಮಾನ ಆಘಾತಗಳಿಂದ ಯಾತನೆಗೊಳಪಟ್ಟು ಪಕ್ಷದ ಕಾರ್ಯಕರ್ತರು ತಮ್ಮ ನಂಬಿಕೆಯಲ್ಲಿ ವಿಚಲಿತರಾಗಿ, ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ತಮ್ಮ ಧ್ಯೇಯದ ಸಫಲತೆಯ ಬಗ್ಗೆ ಸಂದೇಹಪಡುತ್ತಿದ್ದರು. ಆಗ ಅವರು ಕಾಮ್ರೇಡ್ ಶಿವದಾಸ್ ಘೋಷ್‌ರೆಡೆಗೆ ಧಾವಿಸಿ ತಮ್ಮ ಸಂದೇಹ ಆತಂಕಗಳನ್ನು ವ್ಯಕ್ತಪಡಿಸುತ್ತಿದ್ದರು – "ಇದು ಎಂದಿಗಾದರೂ ಸಾಧ್ಯವೇ?" ಇದಕ್ಕೆ ಅವರ ಪ್ರತ್ಯುತ್ತರ ಅಷ್ಟೇ ದೃಢವೂ ನೇರವಾದುದೂ ಆಗಿತ್ತು:

"ಸಾಧ್ಯವಿಲ್ಲವೆಂದೇ ಅಂದುಕೊಳ್ಳೋಣ, ಹಾಗಾದರೆ ಇನ್ನೇನು ಮಾಡೋಣ? ನಾವು ಈ ಹೋರಾಟವನ್ನು ತೊರೆದು ನೌಕರಿಯೊಂದನ್ನು ಹಿಡಿದು, ಸಾಮಾನ್ಯ ರೀತಿಯ ದಾಸ್ಯ ಜೀವನವನ್ನು ಒಪ್ಪಿಕೊಳ್ಳೋಣವೇ ಅಥವಾ ಕಮ್ಯುನಿಸ್ಟ್ ಅಲ್ಲದ ಸಿಪಿಐ ಸೇರೋಣವೇ? ಈ ರೀತಿಯಲ್ಲಿ ನಮ್ಮ ಆತ್ಮಸಾಕ್ಷಿಗೆ ದ್ರೋಹ ಬಗೆದುಕೊಳ್ಳೋಣವೆ? ಇದು ನನ್ನಿಂದ ಎಂದಿಗೂ ಸಾಧ್ಯವಿಲ್ಲ. ಕ್ರಾಂತಿಗೆ ನಾನಿನ್ನೇನು ಮಾಡಲಾಗದಿದ್ದರೂ ಕೊನೆಯ ಪಕ್ಷ ಮೊದಲ ಇಟ್ಟಿಗೆಯನ್ನಾದರೂ ಇಡುತ್ತೇನೆ. ಭವಿಷ್ಯದಲ್ಲಿ ಉಳಿದವರು ಕ್ರಾಂತಿಕಾರಿ ಪಕ್ಷದ ಸೌಧವನ್ನು ಅದರ ಅಡಿಗಲ್ಲಿನ ಮೇಲೆ ಕಟ್ಟುತ್ತಾರೆ. ನನ್ನ ಅಸ್ತಿತ್ವದ ಪ್ರತಿ ಕ್ಷಣದಲ್ಲೂ ನನ್ನ ಕನಸು, ಆಕಾಂಕ್ಷೆಗಳೊಂದಿಗೆ ಜೀವನಕ್ಕೆ ನನಗೆ ತಿಳಿದಿರುವುದು ಒಂದೇ ಅರ್ಥ – ನಾನು ಬದುಕುಳಿದಿರುವವರೆಗೂ ಒಬ್ಬ ಕ್ರಾಂತಿಕಾರಿಯಾಗಿಯೇ ಬಾಳುತ್ತೇನೆ." ಹೀಗೆ ಪ್ರತಿ ಕ್ಷಣದಲ್ಲೂ ಅವರು ತಮ್ಮ ಕ್ರಾಂತಿಕಾರಿ ಸಹಯೋಧರಲ್ಲಿ ಕ್ರಾಂತಿಕಾರಿ ಜೀವನದ ಹೊಸಮೌಲ್ಯ ಪ್ರಜ್ಞೆಯನ್ನು ತುಂಬಿ, ಕ್ರಾಂತಿಕಾರಿ ಧ್ಯೇಯದ ಪರವಾಗಿ ದೃಢ ವಿಶ್ವಾಸವನ್ನು ಉಂಟುಮಾಡುತ್ತಿದ್ದರು ಹಾಗೂ ಕ್ರಾಂತಿಕಾರಿ ಚಾರಿತ್ರ್ಯದ ದೃಢತೆಯಿಂದ ಅವರನ್ನು ಸಚೇತನಗೊಳಿಸುತ್ತಿದ್ದರು.

ಇಂತಹ ಅದ್ವಿತೀಯ ಉಗ್ರ ಹೋರಾಟ, ಅಖಂಡ ಸಂಕಲ್ಪ ಹಾಗೂ ಅನನ್ಯ ಸಾಹಸಗಳ ಮೂಲಕ ಅವರು ನಮ್ಮ ದೇಶದ ಕಾರ್ಮಿಕವರ್ಗದ ನೈಜ ಕ್ರಾಂತಿಕಾರಿ ಪಕ್ಷವಾದ ಎಸ್‌ಯುಸಿಐಗೆ ಬಲವಾದ ಅಡಿಪಾಯವನ್ನು ಹಾಕಿದರು ಹಾಗೂ ಕಳೆದ ಇಪ್ಪತ್ತೆಂಟು ವರ್ಷಗಳ* ಅವಧಿಯಲ್ಲಿ ಎಲ್ಲಾ ರೀತಿಯ ಅನಿಷ್ಟ, ಅಡೆತಡೆಗಳ ವಿರುದ್ಧ ಅವಿರತ ಹೋರಾಟ ನಡೆಸುವ ಗತಿಯಲ್ಲಿ ಅವರು ಇಟ್ಟಿಗೆಯ ಮೇಲೆ ಇಟ್ಟಿಗೆಯನ್ನಿಡುತ್ತಾ ಪಕ್ಷದ ಪ್ರಜ್ವಲವಾದ ಕಟ್ಟಡವನ್ನು ಕಟ್ಟಿದರು. ಶ್ರಮಜೀವಿಗಳು ಎಲ್ಲಾ ರೀತಿಯ ಶೋಷಣೆಯಿಂದ ವಿಮುಕ್ತಿ ಪಡೆದುಕೊಳ್ಳಲು ಅವರು ಸೂಕ್ತವಾದ ಹಾಗೂ ವೈಜ್ಞಾನಿಕವಾದ ಕಾರ್ಯಕ್ರಮವನ್ನು ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯ ರಣನೀತಿ ರಣಕೌಶಲ್ಯಗಳನ್ನು ರೂಪಿಸಿದರು. ಸಮಗ್ರ ಜ್ಞಾನದ ಎಲ್ಲಾ ವಿಭಾಗಗಳನ್ನು ಆವರಿಸಿದ ವಿಪುಲವಾದ ಜ್ಞಾನಭಂಡಾರವನ್ನು ಮತ್ತು ಇಂದು ಕಾರ್ಮಿಕವರ್ಗ ಹೋರಾಟಕ್ಕೆ ಸರಿಯಾಗಿ ಮಾರ್ಗದರ್ಶನವೀಯಲು ಸಮರ್ಥವಾದ ಕಾರ್ಮಿಕವರ್ಗ ಸಂಸ್ಕೃತಿಯ ಅತ್ಯಂತ ಮುಂದುವರೆದ ಪರಿಕಲ್ಪನೆಯನ್ನೂ ಅವರು ನಮಗೆ ನೀಡಿದ್ದಾರೆ. ಕೆಲವು ಜನ ಒಂದಾಗಿ ರಚಿಸಿಕೊಂಡ ಪಕ್ಷವೊಂದು, ಆರಂಭದಿಂದಲೂ ಕಾರ್ಮಿಕವರ್ಗ ಪಕ್ಷವನ್ನು ಕಟ್ಟುವ ಸೂಕ್ತವಾದ ವೈಜ್ಞಾನಿಕ ಪ್ರಕ್ರಿಯೆಯನ್ನು ಅನುಸರಿಸದಿದ್ದಲ್ಲಿ, ಕೇವಲ ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಆದರ್ಶವೆಂದು ಒಪ್ಪಿಕೊಳ್ಳುವುದರಿಂದ ಮಾತ್ರವೇ ಅದು ನೈಜ ಕಾರ್ಮಿಕವರ್ಗ ಪಕ್ಷವಾಗುವುದಿಲ್ಲ ಎಂಬ ಸತ್ಯವನ್ನು ಅವರು ಸರಿಯಾಗಿ ಗ್ರಹಿಸಲು ಸಮರ್ಥರಾದರು. ಈ ಸಾಕ್ಷಾತ್ಕಾರದಿಂದಾಗಿ ಅವರು ಮೊದಲಿನಿಂದಲೂ ಕಾರ್ಮಿಕವರ್ಗದ ಕ್ರಾಂತಿಕಾರಿ ಚಳುವಳಿಗೆ ಪೂರಕವಾದ ಜೀವನ ಪರಿಕಲ್ಪನೆಯನ್ನು ಗಳಿಸಿಕೊಳ್ಳುವ ಹೋರಾಟವನ್ನು ನಡೆಸಿದರು ಹಾಗೂ ಅತ್ಯಂತ ಜಾಗರೂಕತೆ ಮತ್ತು ಪ್ರಾಮಾಣಿಕತೆಗಳಿಂದ ಪಕ್ಷವನ್ನು ಕಟ್ಟಿದರು. "ಜಗತ್ತನ್ನು ಪರಿವರ್ತಿಸುವ ಮೊದಲು ಕಾರ್ಮಿಕರು ತಮ್ಮನ್ನೇ ಪರಿವರ್ತಿಸಿಕೊಳ್ಳಬೇಕು" ಎಂಬ ಮಾರ್ಕ್ಸ್‌ರ ಐತಿಹಾಸಿಕ ಬೋಧನೆಯ ಆಧಾರದಲ್ಲಿ ಅವರು ತಮ್ಮ ಧ್ಯೇಯಸಾಧನೆಯನ್ನು ಈ ಮಾರ್ಗದರ್ಶಕ ತತ್ವದಿಂದಲೇ ಆರಂಭಿಸಿದರು. ಈ ಪಕ್ಷವನ್ನು ಕಟ್ಟಲು ಮುಂದೆ ಬಂದು ನೇತಾರ ಪಾತ್ರ ವಹಿಸುವವರು ಕಮ್ಯುನಿಸ್ಟ್ ಚಾರಿತ್ರ್ಯವನ್ನು ಗಳಿಸಿಕೊಳ್ಳುವ ಹೋರಾಟದಲ್ಲಿ ತಮ್ಮನ್ನೇ ಸಾಮೂಹಿಕ ರೀತಿಯಲ್ಲಿ ತೊಡಗಿಸಿಕೊಳ್ಳಬೇಕು. ಅವರು ಹೇಳಿದರು: "ಪ್ರಸಕ್ತ ಸಮಾಜದಲ್ಲಿ ನೀತಿ, ನೈತಿಕತೆ, ಕರ್ತವ್ಯ ಹಾಗೂ ಬಾಧ್ಯತೆಗಳ ಕುರಿತಾಗಿ ಇರುವ ಪರಿಜ್ಞಾನವಾಗಲೀ ಅಥವಾ ಜೀವನದ ಪ್ರತಿಯೊಂದು ರಂಗದಲ್ಲಿ, ಇನ್ನೂ ಮಾರ್ಗದರ್ಶನ ನೀಡುತ್ತಿರುವ ಮೌಲ್ಯಗಳಾಗಲಿ,

* **ಈ ಪುಸ್ತಕ ಪ್ರಕಟವಾದದ್ದು 1976ರಲ್ಲಿ**

ಇವೆಲ್ಲವೂ ಬೂರ್ಜ್ವಾ ಪರಿಕಲ್ಪನೆಗಳೇ ಆಗಿವೆ. ಆದ್ದರಿಂದ ಬೂರ್ಜ್ವಾ ಮೌಲ್ಯಗಳನ್ನು ಬದಲಾಯಿಸಿಕೊಂಡು ಕಮ್ಯುನಿಸ್ಟ್ ನೈತಿಕ ಮೌಲ್ಯಗಳನ್ನು ಗಳಿಸಿಕೊಳ್ಳುವ ಹಾಗೂ ಬೂರ್ಜ್ವಾ ದೃಷ್ಟಿಕೋನದ ಸ್ಥಾನದಲ್ಲಿ ಕಾರ್ಮಿಕವರ್ಗ ದೃಷ್ಟಿಕೋನವನ್ನು, ಎಂದರೆ ದ್ವಂದ್ವಾತ್ಮಕ ವಸ್ತುವಾದಿ ಅಥವಾ ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವ ಸತತ ಅವಿರತ ಪ್ರಜ್ಞಾಪೂರ್ವಕ ಹೋರಾಟವನ್ನು ನಡೆಸಬೇಕು. ಆಗ ಮಾತ್ರವೇ ನಾವು ಕಮ್ಯುನಿಸ್ಟರಾಗಿ ಹೊರಹೊಮ್ಮಲಿಕ್ಕೆ ಸಾಧ್ಯ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು."

ಕೊಳೆತಕ್ಕೊಳಗಾದ ಹಾಗೂ ತೀವ್ರ ಪ್ರತಿಗಾಮಿಯಾಗಿರುವ ವ್ಯಕ್ತಿವಾದ ತುಂಬಿರುವ ಇಂದಿನ ಕಾಲದ ಅವಶ್ಯಕತೆಗೆ ತಕ್ಕಂತೆ, ಕಮ್ಯುನಿಸ್ಟ್ ಚಾರಿತ್ರ್ಯದ ಒಂದು ಸಂಪೂರ್ಣವಾಗಿ ಹೊಸದಾದ ಹಾಗೂ ಮತ್ತಷ್ಟು ಮುಂದುವರೆದ ಪರಿಕಲ್ಪನೆಯನ್ನು ಅವರು ನಮಗೆ ನೀಡಿದರು. ಅವರು ಹೇಳಿದರು: "ಕಾರ್ಮಿಕವರ್ಗದ ಕ್ರಾಂತಿಕಾರಿ ರಾಜಕೀಯದಲ್ಲಿ ಇಲ್ಲಿಯವರೆಗೂ ಪರಿಭಾವಿಸಿಕೊಂಡಿದ್ದ ಉನ್ನತ ಮಟ್ಟದ ಕಮ್ಯುನಿಸ್ಟ್ ನೈತಿಕತೆಯೆಂದರೆ – ಮಹತ್ತರ ಸಾಮಾಜಿಕ ಹಿತಾಸಕ್ತಿಗಾಗಿ ವ್ಯಕ್ತಿಗತ ಹಿತಾಸಕ್ತಿಗಳನ್ನೂ ಸಮರ್ಪಿಸುವುದು." ಇದಕ್ಕೆ ಪ್ರತಿಯಾಗಿ, ಈ ಯುಗದಲ್ಲಿ ಉನ್ನತ ಕಮ್ಯುನಿಸ್ಟ್ ಚಾರಿತ್ರ್ಯವನ್ನು ಪಡೆಯಲು, "ವ್ಯಕ್ತಿಯೊಬ್ಬ ನಿಸ್ಸಂಶಯವಾಗಿಯೂ, ಸಂತೋಷವಾಗಿಯೂ ಹಾಗೂ ಬೇಷರತ್ತಾಗಿಯೂ ತನ್ನನ್ನೇ ಕಾರ್ಮಿಕವರ್ಗ, ಕ್ರಾಂತಿ ಹಾಗೂ ಪಕ್ಷದ ಹಿತಾಸಕ್ತಿಗಳೊಂದಿಗೆ ಐಕ್ಯಗೊಳಿಸಿಕೊಳ್ಳಬೇಕು" ಎಂದು ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ತೋರಿಸಿಕೊಟ್ಟರು. ಅವರೇ ಸ್ವತಃ ಈ ಉನ್ನತ ಮಟ್ಟದ ಕಮ್ಯುನಿಸ್ಟ್ ಚಾರಿತ್ರ್ಯದ ಜೀವಂತ ನಿದರ್ಶನವಾಗಿದ್ದರು. ಅವರ ವೈಯಕ್ತಿಕ ಜೀವನ ಹಾಗೂ ಕ್ರಾಂತಿಕಾರಿ ಜೀವನಗಳೆರಡೂ ಒಂದೇ ಆಗಿ ಮಿಲನಹೊಂದಿದ್ದವು. ಅವರ ಜೀವನವು ಕ್ರಾಂತಿ, ಕ್ರಾಂತಿಕಾರಿ ಚಳುವಳಿ ಹಾಗೂ ಪಕ್ಷದೊಂದಿಗೆ ಸಂಪೂರ್ಣವಾಗಿ ಐಕ್ಯಗೊಂಡಿತ್ತು. ಪಕ್ಷದ ಆರಂಭದಿಂದ ತಮ್ಮ ಕೊನೆಯುಸಿರಿರುವವರೆಗೂ ಅವರು ಪಕ್ಷದ ನಾಯಕರು ಹಾಗೂ ಕಾರ್ಯಕರ್ತರನ್ನು ತೊಡಗಿಸಿಕೊಂಡು ಸಾಮೂಹಿಕವಾಗಿ ಈ ಹೋರಾಟವನ್ನು ನಡೆಸಿದರು. ಈ ಹೋರಾಟದ ಗತಿಯಲ್ಲಿ ಅವರು, ತಾವೇ ಕಮ್ಯುನಿಸ್ಟ್ ಚಾರಿತ್ರ್ಯದ, ಒಂದು ಹೊಸ ಎತ್ತರವನ್ನು ತಲುಪಿದರಷ್ಟೇ ಅಲ್ಲದೆ ಉನ್ನತ ಕ್ರಾಂತಿಕಾರಿ ಮಟ್ಟವನ್ನು ಹೊಂದಿರುವ ನಾಯಕರು ಹಾಗೂ ಕಾರ್ಯಕರ್ತರ ಒಂದು ತಂಡವನ್ನೇ ಸೃಷ್ಟಿಸಿದರು. ಆದ್ದರಿಂದಲೇ ಈ ಪಕ್ಷದಲ್ಲಿ ಯಾವುದೇ ಒಬ್ಬ ನಾಯಕರ ಅಥವಾ ಕಾರ್ಯಕರ್ತರ ಕ್ರಾಂತಿಕಾರಿ ಸಾಮರ್ಥ್ಯವನ್ನು ಅಳೆಯುವಾಗ, ಅವರು ಎಷ್ಟು ಉತ್ತಮವಾಗಿ ಮಾತನಾಡುತ್ತಾರೆ ಅಥವಾ ಬರೆಯುತ್ತಾರೆ, ಎಷ್ಟು ಉನ್ನತ ಪದವಿಗಳನ್ನು ಪಡೆದಿದ್ದಾರೆ ಅಥವಾ ಎಂತಹ ಸಾಮಾಜಿಕ ಸ್ಥಾನಮಾನವನ್ನು

ಹೊಂದಿದ್ದಾರೆ – ಇದು ಯಾವುದೂ ನಿರ್ಣಾಯಕ ಅಂಶವಲ್ಲ; ನಾಯಕರು ಕಾರ್ಯಕರ್ತರು ಪರೀಕ್ಷೆಗೊಳಪಟ್ಟು ಹದಗೊಂಡ ಕ್ರಾಂತಿಕಾರಿಗಳಾಗಿ ಯಾವ ಮಟ್ಟವನ್ನು ತಲುಪಿದ್ದಾರೆಂಬುದರಿಂದ, ಈ ಪಕ್ಷದಲ್ಲಿ ಅವರು ಪ್ರಜ್ಞಾಪೂರ್ವಕ ಹಾಗೂ ನಿರಂತರ ಹೋರಾಟದ ಮೂಲಕ ಎಷ್ಟರಮಟ್ಟಿಗೆ ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಸಮಾಜದ ಹಿತಾಸಕ್ತಿಯೊಂದಿಗೆ, ಎಂದರೆ ಕ್ರಾಂತಿ ಹಾಗೂ ಕ್ರಾಂತಿಕಾರಿ ಪಕ್ಷದ, ಹಿತಾಸಕ್ತಿಗಳೊಂದಿಗೆ ಐಕ್ಯಗೊಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ ಎಂಬುದರಿಂದ ತೀರ್ಮಾನಿಸಲಾಗುತ್ತದೆ. ಅವರು ಆರಂಭಿಸಿದ ಈ ವೈಜ್ಞಾನಿಕ ಪ್ರಕ್ರಿಯೆಯ ಆಧಾರದಲ್ಲಿ ನಮ್ಮ ಪಕ್ಷವು ಬೆಳೆದಿದೆ. ಈ ಪ್ರಕ್ರಿಯೆ ನಮ್ಮ ಪಕ್ಷದೊಳಗೆ ಇನ್ನೂ ಕಾರ್ಯಾಚರಣೆಯಲ್ಲಿದೆ. ಈ ಪ್ರಕ್ರಿಯೆಯಲ್ಲಿ ಉನ್ನತ ಮಟ್ಟದ ನೀತಿ ಸಂಸ್ಕೃತಿಗಳನ್ನು ಪಡೆದು ಪಕ್ಷದ ವಿವಿಧ ಮಟ್ಟಗಳಲ್ಲಿ ಅಚಲವಾಗಿಯೂ ನಿರಂತರವಾಗಿಯೂ "ಪಕ್ಷವೇ ಜೀವನ, ಕ್ರಾಂತಿಯೇ ಅಸ್ತಿತ್ವದ ವೈಖರಿ" – ಈ ಪರಿಕಲ್ಪನೆಯು ಮೂರ್ತರೂಪ ಹೊಂದಿದ ಸಮರ್ಥ ನಾಯಕತ್ವ ಹೊರಹೊಮ್ಮುತ್ತಲೇ ಇದೆ.

ಕಾರ್ಮಿಕವರ್ಗದ ವಿಮುಕ್ತಿಗಾಗಿ ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟ ಕಾಮ್ರೇಡ್ ಶಿವದಾಸ್ ಘೋಷ್‌ರು ತಮ್ಮ ಜೀವನಪರ್ಯಂತ ಹೋರಾಟದಿಂದ ಗಳಿಸಿಕೊಂಡ ವಿಪುಲ ಜ್ಞಾನ ಹಾಗೂ ಅನುಭವಗಳಿಂದ, ಕ್ರಾಂತಿಗೆ ಒಂದು ಅನಿವಾರ್ಯ ಅಸ್ತ್ರವಾದ ಕಾರ್ಮಿಕವರ್ಗದ ನೈಜ ಕ್ರಾಂತಿಕಾರಿ ಪಕ್ಷ ಎಸ್‌ಯುಸಿಐಯನ್ನೂ ಹಾಗೂ ಕ್ರಾಂತಿಯನ್ನು ನೆರವೇರಿಸಲು ಸಮರ್ಥರಾದಂತಹ ಸಮರ್ಪಿತ ಕ್ರಾಂತಿಕಾರಿಗಳ ತಂಡವನ್ನೂ ರಚಿಸಿದರು. ಕ್ರಮೇಣ ದೇಶದ ಉದ್ದಗಲಕ್ಕೂ ಪಕ್ಷದ ವಿಸ್ತರಣೆ ಹಾಗೂ ಸದೃಢೀಕರಣದ ಮೂಲಕ ಈ ಹೋರಾಟದ ಫಲವು ವ್ಯಕ್ತವಾಗುತ್ತಿದೆ. ಆದ್ದರಿಂದ ಕಾರ್ಮಿಕವರ್ಗದ ಮಹಾನ್ ಕ್ರಾಂತಿಕಾರಿ ನಾಯಕ ಕಾಮ್ರೇಡ್ ಶಿವದಾಸ್ ಘೋಷ್‌ರ ಬೋಧನೆಗಳ ಸತತ ಆಚರಣೆಯಿಂದ ಹಾಗೂ ಜೊತೆಜೊತೆಗೆ ಅವರಿಂದ ಸ್ಥಾಪಿಸಲ್ಪಟ್ಟ ಕಾರ್ಮಿಕವರ್ಗದ ಏಕೈಕ ನೈಜ ಕ್ರಾಂತಿಕಾರಿ ಪಕ್ಷವಾದ ಎಸ್‌ಯುಸಿಐಯನ್ನು ಕ್ರಾಂತಿಕಾರಿ ಹೋರಾಟಗಳನ್ನು ನಡೆಸುವಷ್ಟು ಬಲಪಡಿಸುವ ಮೂಲಕ ಮಾತ್ರವೇ ಭಾರತದ ಕಾರ್ಮಿಕವರ್ಗ ಎಲ್ಲಾ ರೀತಿಯ ಶೋಷಣೆಗಳಿಂದ ತನ್ನ ವಿಮುಕ್ತಿಯನ್ನು ಗಳಿಸಿಕೊಳ್ಳಬಹುದು. ತಮ್ಮ ಚಿಂತನೆಗಳೊಂದಿಗೆ ಅವರು ನಮ್ಮೊಂದಿಗೆ ಅಮರರಾಗಿ ಉಳಿದಿದ್ದಾರೆ ಹಾಗೂ ಎಂದಿಗೂ ಉಳಿಯುತ್ತಾರೆ; ಅವರ ಹೆಸರು ಹಾಗೂ ವಿಚಾರಗಳು ಅಮರವಾಗಿ ಎಂದೆಂದಿಗೂ ನಮಗೆ ಸ್ಫೂರ್ತಿದಾಯಕವಾಗಿಯೂ, ದಾರಿದೀಪವಾಗಿಯೂ ಬೆಳಗುತ್ತವೆ.

ನಮ್ಮನ್ನಗಲಿದ ಈ ಮಹಾನ್ ನಾಯಕರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ಗಾಢನೋವಿನ ಈ ಘಳಿಗೆಯಲ್ಲಿ ನಾವು ಈ ಪ್ರತಿಜ್ಞೆಯನ್ನು ಮಾಡುತ್ತೇವೆ – ವರ್ಗ, ಪಕ್ಷ ಹಾಗೂ ಕ್ರಾಂತಿಯೊಂದಿಗೆ ತಮ್ಮನ್ನೇ ಪೂರ್ಣವಾಗಿ ಐಕ್ಯವಾಗಿಸಿಕೊಂಡ ನಮ್ಮ ನಲ್ಮೆಯ ನಾಯಕ ಕಾಮ್ರೇಡ್ ಶಿವದಾಸ್ ಘೋಷ್‌ರ ಅನನ್ಯ ಕ್ರಾಂತಿಕಾರಿ ಚಾರಿತ್ರ್ಯದ ಮಹಾನ್ ನಿದರ್ಶನವನ್ನನುಸರಿಸಿ ನಾವು ಕ್ರಾಂತಿಗಾಗಿ ನಮ್ಮನ್ನೇ ಇನ್ನೂಹೆಚ್ಚಾಗಿ ಸಮರ್ಪಿಸಿಕೊಳ್ಳುತ್ತೇವೆ. ಅಲ್ಲದೆ ನಮ್ಮ ಮಹಾನ್ ನಾಯಕ, ಶಿಕ್ಷಕ ಹಾಗೂ ಮಾರ್ಗದರ್ಶಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರಿಂದ ಸ್ಥಾಪಿತವಾದ ಪಕ್ಷದೊಂದಿಗೆ ನಮ್ಮನ್ನೇ ಇನ್ನೂ ಹೆಚ್ಚಾಗಿ ಐಕ್ಯವಾಗಿಸಿಕೊಳ್ಳುತ್ತೇವೆ.

ಅವರ ಬೋಧನೆಗಳನ್ನನುಸರಿಸಿ ನಾವು, ಶ್ರಮಜೀವಿಗಳ ಕ್ರಾಂತಿಕಾರಿ ಹೋರಾಟಗಳನ್ನು ಸಂಘಟಿಸುವಲ್ಲಿ ನಿರತರಾಗಿರುವಾಗ, ಉನ್ನತ ಕ್ರಾಂತಿಕಾರಿ ಚಾರಿತ್ರ್ಯವನ್ನು ಗಳಿಸಿಕೊಳ್ಳುವ ಹೋರಾಟವನ್ನು ಹಾಗೂ ಕಾರ್ಮಿಕವರ್ಗದ ಉನ್ನತ ನೀತಿ ಸಂಸ್ಕೃತಿಗಳನ್ನು ಯಾವಾಗಲೂ ಎತ್ತಿಹಿಡಿಯುವ ಹೋರಾಟವನ್ನು ಅವಿರತವಾಗಿ ನಡೆಸುತ್ತೇವೆ; ಅವರು ತಮ್ಮ ಜೀವನದಾದ್ಯಂತ ನಡೆಸಿದ ಹೋರಾಟದ ಗತಿಯಲ್ಲಿ ಅವಿಶ್ರಾಂತ ಪರಿಶ್ರಮದ ಮೂಲಕ ಗಳಿಸಿಕೊಂಡ ಹಾಗೂ ಕಾರ್ಮಿಕವರ್ಗದ ಕ್ರಾಂತಿಕಾರಿ ಚಳುವಳಿಗೆ ಕೊಡುಗೆಯಾಗಿ ನೀಡಿರುವ ವಿಪುಲ ಜ್ಞಾನಭಂಡಾರದಲ್ಲಿರುವ ಬೋಧನೆಗಳ ಸಾಕ್ಷಾತ್ಕಾರವನ್ನೂ ಇನ್ನೂ ಗಾಢವಾಗಿ ಗಳಿಸಿಕೊಳ್ಳಲು ಪಣತೊಡುತ್ತೇವೆ.

ಅವರ ಅತ್ಯುತ್ಕೃಷ್ಟ ಸೃಷ್ಟಿಯಾದ, ಭಾರತದ ಏಕೈಕ ಕಮ್ಯುನಿಸ್ಟ್ ಪಕ್ಷ ಎಸ್‌ಯುಸಿಐ ಅನ್ನು ಬಲಪಡಿಸಿ ಶ್ರಮಜೀವಿಗಳ ವಿಮುಕ್ತಿ ಹೋರಾಟವನ್ನು ಅಂತಿಮ ವಿಜಯಕ್ಕೆ ಮುನ್ನಡೆಸಲು ಹಾಗೂ ಅವರು ನಮಗೆ ಕಲಿಸಿರುವಂತೆ ನಮ್ಮ ಪಕ್ಷದೊಳಗೆ ಸಾಮೂಹಿಕ ನಾಯಕತ್ವವನ್ನು ಹಾಗೂ ಕಾರ್ಮಿಕವರ್ಗದ ಪ್ರಜಾತಂತ್ರವನ್ನು ಜೀವದ ಜೀವದಂತೆ ಸಂರಕ್ಷಿಸುತ್ತೇವೆಂದು ಪಣ ತೊಡುತ್ತೇವೆ.

ಎಲ್ಲಾ ರೀತಿಯ ಶೋಷಣೆಯಿಂದ ನಮ್ಮ ದೇಶದ ಮರ್ದಿತ ಜನತೆಯ ವಿಮುಕ್ತಿಯನ್ನು ಗಳಿಸಲಿಕ್ಕೆ ಸೂಕ್ತ ಮಾರ್ಗಸೂಚಿಯಾಗಿ ಅವರು ಒದಗಿಸಿರುವ ಸುಸ್ಪಷ್ಟ ರಣನೀತಿ, ರಣಕೌಶಲ್ಯಗಳ ಆಧಾರದಲ್ಲಿ, ನಮ್ಮ ರಕ್ತದ ಕೊನೆಯ ಹನಿಯಿರುವವರೆಗೂ, ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯ ಧ್ಯೇಯಗಳನ್ನು ಪೂರ್ಣ ವಿಜಯದತ್ತ ಮುನ್ನಡೆಸುತ್ತೇವೆಂದು ಪಣತೊಡುತ್ತೇವೆ.

ಅವರು ನಮಗೆ ಬೋಧಿಸಿರುವಂತೆ ಕಾರ್ಮಿಕವರ್ಗದ ಮೂಲ ರಾಜಕೀಯ ಪಥವನ್ನು ಎಂದಿಗೂ ಎತ್ತಿಹಿಡಿಯಲು ಹಾಗೂ ಮಾರ್ಕ್ಸ್‌ವಾದ–ಲೆನಿನ್‌ವಾದದ ಕ್ರಾಂತಿಕಾರಿ ತಿರುಳನ್ನು ಅಚಲವಾಗಿ ಸಂರಕ್ಷಿಸಲು, ಎಲ್ಲಾ ವಿಧದ ಪರಿಷ್ಕರಣವಾದ, ಸುಧಾರಣಾವಾದ ಹಾಗೂ ಸೋಷಲ್ ಡೆಮಾಕ್ರೆಟಿಕ್‌ವಾದಗಳ ವಿರುದ್ಧದ ನಮ್ಮ ರಾಜಿರಹಿತ ಹೋರಾಟದಲ್ಲಿ ಎಂದಿಗೂ ದೃಢವಾಗಿರುತ್ತೇವೆಂದು ಪಣ ತೊಡುತ್ತೇವೆ.

ಫ್ಯಾಸೀವಾದದ ಬಗ್ಗೆ ಅವರು ತೋರಿಸಿ ಕೊಟ್ಟಂತಹ ಸರಿಯಾದ ಹಾಗೂ ವೈಜ್ಞಾನಿಕ ಬೋಧನೆಗಳ ಮಾರ್ಗದರ್ಶನದಲ್ಲಿ ಮಾನವ ನಾಗರಿಕತೆಯ ಹೇಯ ವೈರಿಯಾದ ಫ್ಯಾಸೀವಾದದ ವಿರುದ್ಧದ ಅವಿಶ್ರಾಂತ ಹಾಗೂ ಉಗ್ರ ಹೋರಾಟಕ್ಕಾಗಿ, ಮಿಲಿಯಾಂತರ ಜನತೆಯನ್ನು ಸಂಘಟಿಸುತ್ತೇವೆಂದು ನಾವು ಪಣ ತೊಡುತ್ತೇವೆ.

ಅಪಾರ ನಷ್ಟದ ಈ ಘಳಿಗೆಯಲ್ಲಿ ನಾವು ಅವರ ಬೋಧನೆಯಂತೆ ನಮ್ಮ ಶೋಕವನ್ನು ದೃಢಸಂಕಲ್ಪ, ಧೈರ್ಯ ಹಾಗೂ ಕ್ರಾಂತಿಕಾರಿ ಉದ್ದೇಶ ಸಾಧನೆಗಳಾಗಿ ಪರಿವರ್ತಿಸುತ್ತೇವೆಂದು ಪಣ ತೊಡುತ್ತೇವೆ. ಈ ಶೂನ್ಯವನ್ನು ತುಂಬಲು ನಾವೆಲ್ಲಾ 'ಒಬ್ಬ ಮನುಷ್ಯ'ನಂತೆ ಪರಿಶ್ರಮಿಸುತ್ತೇವೆಂದು ಪ್ರತಿಜ್ಞೆ ಮಾಡುತ್ತೇವೆ.

ಅವರಿಂದ ಕಲಿತ ಮತ್ತು ತರಬೇತಿ ಪಡೆದ ಸಹಸ್ರಾರು ಕ್ರಾಂತಿಕಾರಿ ಕಾರ್ಯಕರ್ತರಾದ ನಾವು ನಮ್ಮ ರಕ್ತದ ಕೊನೆಯ ಹನಿಯಿರುವವರೆಗೂ ಕ್ರಾಂತಿ ಹಾಗೂ ಕಾರ್ಮಿಕವರ್ಗದ ಅಂತರರಾಷ್ಟ್ರೀಯವಾದದ ಭವ್ಯ ಪತಾಕೆಯನ್ನು ಎತ್ತಿಹಿಡಿಯುತ್ತೇವೆಂದು ಪಣ ತೊಡುತ್ತೇವೆ.

**ಕಾರ್ಮಿಕವರ್ಗದ ಮಹಾನ್ ನಾಯಕ**

**ಕಾಮ್ರೇಡ್ ಶಿವದಾಸ್ ಘೋಷ್ ಲಾಲ್‌ಸಲಾಮ್ !!**